ಸಂಪುಟ 01 । ಸಂಚಿಕೆ 121 । ಗುರುವಾರ 19 ಮಾರ್ಚ್ 2026 । ಪುಟ 4 । ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) ಯುಗಾದಿ ಹಬ್ಬ

2026ರ ಯುಗಾದಿ ಹಬ್ಬದ ಶುಭಾಶಯಗಳು,
ಹಿಂದೂ ಕ್ಯಾಲೆಂಡರ್ ಪ್ರಕಾರ, ಯುಗಾದಿ ಹಬ್ಬವು ಹಿಂದೂಗಳಿಗೆ ಹೊಸ ವರ್ಷದ ಮೊದಲ ದಿನವಾಗಿದೆ. 2026ರ ಯುಗಾದಿ ಹಬ್ಬದ ದಿನದಂದು ವಿಶ್ವಾವಸು ನಾಮ ಸಂವತ್ಸರ ಕಳೆದು ಪರಾಭವ ಸಂವತ್ಸರ ಆರಂಭವಾಗುವುದು. 2026ರ ಯುಗಾದಿ ಹಬ್ಬವನ್ನು ಮಾರ್ಚ್ 19ರಂದು ಗುರುವಾರದ ದಿನ ಆಚರಿಸಲಾಗುತ್ತಿದ್ದು, ಈ ಹಿಂದೂ ಹಬ್ಬವು ಆಳವಾದ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಮಹತ್ವವನ್ನು ಹೊಂದಿದೆ. ನವೀಕರಣ, ಸಕಾರಾತ್ಮಕತೆ ಮತ್ತು ಹೊಸ ಅವಕಾಶಗಳ ಭರವಸೆಯನ್ನು ಇದು ಸಂಕೇತಿಸುತ್ತದೆ. ಈ ಹಬ್ಬದ ದಿನದಂದು ಜನರು ಬೇವು – ಬೆಲ್ಲವನ್ನು ತಿನ್ನುವುದು, ಪಚಡಿಯನ್ನು ತಿನ್ನುವುದು ವಾಡಿಕೆ. ಈ ದಿನದಂದು ಜನರು ಮುಂಜಾನೆ ಬೇಗ ಎದ್ದು ಅಭ್ಯಂಗ ಸ್ನಾನವನ್ನು ಮಾಡಿ, ಹೊಸ ಬಟ್ಟೆಯನ್ನು ಧರಿಸಿ ಪೂಜೆಯನ್ನು ಮಾಡುತ್ತಾರೆ.

## ಸುಭಾಷಿತ

ತೊಲಗಲಿ ದುಃಖ, ತೊಲಗಲಿ ಮತ್ಸರ, ಪ್ರೇಮಕೆ
ಮೀಸಲು ನವ ಸಂವತ್ಸರ! ನಮ್ಮೆದೆಯಲ್ಲಿದೆ ಸುಖನಿಧಿ

ಕುವೆಂಪು

# ವಾರದೊಳಗೆ ಸಿಲಿಂಡರ್ ಸಮಸ್ಯೆಗೆ ಪರಿಹಾರ ಸಚಿವ ಕೆ.ಹೆಚ್. ಮುನಿಯಪ್ಪ

**ಬೆಂಗಳೂರು: ಕೊಲ್ಲಿ ರಾಷ್ಟ್ರಗಳ ಯುದ್ಧದಿಂದಾಗಿರಾಜ್ಯದಲ್ಲಿ ತಲೆದೋರಿರುವ ಗೃಹ ಮತ್ತು ವಾಣಿಜ್ಯ ಬಳಕೆಯ ಸಿಲಿಂಡರ್ ಸಮಸ್ಯೆ ವಾರದೊಳಗೆ ಸಹಜಸ್ಥಿತಿಗೆ ಬರಲಿದ್ದು ಸಾರ್ವಜನಿಕರು ಆತಂಕಕ್ಕೆ ಒಳಗಾಗಬಾರದು ಎಂದು ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಹೆಚ್. ಮುನಿಯಪ್ಪ ವಿಧಾನ ಪರಿಷತ್‌ನಲ್ಲಿ ಹೇಳಿದರು.**

ಸದಸ್ಯರಾದ ಐವಾನ್ ಡಿಸೋಜಾ , ರಮೇಶ್ ಬಾಬು ಮತ್ತಿತರ ಸದಸ್ಯರು ಗ್ಯಾಸ್ ಸಮಸ್ಯೆ ಕುರಿತು ವಿಷಯ ಪ್ರಸ್ತಾಪಿಸಿದಾಗ, ಉತ್ತರಿಸಿದ ಸಚಿವ ಮುನಿಯಪ್ಪ , ಕಾಳಸಂತೆಯಲ್ಲಿ ಗ್ಯಾಸ್ ಪೂರೈಕೆದಾರರು ಸಿಲಿಂಡರ್‌ಗಳನ್ನು ಮಾರಾಟ ಮಾಡಬಾರದು. ಒಂದು ವೇಳೆ ಅಂತಹ ಪ್ರಕರಣಗಳು ಕಂಡು ಬಂದರೇ ಅಂತಹವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು. ರಾಜ್ಯದಲ್ಲಿ ಪ್ರತಿದಿನ 3,50 921 ಸಿಲಿಂಡರ್‌ಗಳ ಅಗತ್ಯವಿದೆ. ಆದರೆ ಕೊಲ್ಲಿ ರಾಷ್ಟ್ರಗಳಲ್ಲಿ



ಉಂಟಾಗಿರುವ ಯುದ್ಧದ ಪರಿಸ್ಥಿತಿಯಿಂದ ನಮ ಬೇಡಿಕೆಗೆ ತಕ್ಕಂತೆ ಗ್ಯಾಸ್ ಪೂರೈಕೆ ಆಗುತ್ತಿಲ್ಲ. ಎಲ್‌ಪಿಜಿ ಕೊರತೆಗೆ ಸಂಬಂಧಿಸಿದ ಸಮಸ್ಯೆ ಇನ್ನೂ ಒಂದು ವಾರ ಇರುತ್ತದೆ.

ಇದನ್ನು ಅರಿತು ಹೋಟೆಲ್ ಮಾಲೀಕರು ಪರಿಸ್ಥಿತಿಗೆ ಹೊಂದಿಕೊಂಡು ಸಹಕರಿಸಬೇಕು. ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ಕೊರತೆ ಹಿನ್ನೆಲೆಯಲ್ಲಿ ಹೋಟೆಲ್‌ಗಳು ಮುಂದಿನ 1 ವಾರದವರೆಗೆ ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳಬೇಕು. ಎಲ್‌ಪಿಜಿ ಪೂರೈಕೆ ಸಹಜ ಸ್ಥಿತಿಗೆ ಬರುವವರೆಗೆ ಮಾಲೀಕರು ತಾಳೆಯಿಂದಿರಬೇಕು ಎಂದು ಮನವಿ ಮಾಡಿದರು. ರಾಜ್ಯದಲ್ಲಿ ನಿತ್ಯ 44,000 ಕಮರ್ಷಿಯಲ್ ಗ್ಯಾಸ್ ಸಿಲಿಂಡರ್ ಬೇಕು. ಶೇ.20ರಂತೆ ನಮಗೆ 9,000 ಸಿಲಿಂಡರ್ ಸಿಗುತ್ತೆ. ಇದರಲ್ಲಿ 4,000 ಆಸ್ಪತ್ರೆಗಳಿಗೆ ಹೋಗುತ್ತೆ. ಆಟೋಗಳಿಗೆ 2,500 ಪೂರೈಕೆ ಹಾಗೂ ಹೋಟೆಲ್‌ಗಳಿಗೆ ನಿತ್ಯ 1,000 ಸಿಲಿಂಡರ್ ಕೊಡಲು ನಿರ್ಧಾರ ಮಾಡಲಾಗಿದೆ. ತೈಲ ಕಂಪನಿಗಳೊಂದಿಗೆ ನಡೆಸಿದ ಸಭೆಯಲ್ಲಿ ಆದ್ಯತಾ ಸೇವೆಗಳೆಂದು ಪರಿಗಣಿಸಲಾಗಿರುವ ಆಸ್ಪತ್ರೆಗಳು, ಹಾಸ್ಟೆಲ್, ವಸತಿ ಶಾಲೆಗಳು, ಆಟೋ ಸೇರಿದಂತೆ ಇನ್ನಿತರ 5–6 ವಲಯಗಳಿಗೆ ವಾಣಿಜ್ಯ ಬಳಕೆಯ ಸಿಲಿಂಡರ್ ಪೂರೈಕೆಯಲ್ಲಿ ವ್ಯತ್ಯಯವಾಗದಂತೆ ನೋಡಿಕೊಳ್ಳುವಂತೆ ಸೂಚಿಸಲಾಗಿದೆ ಎಂದು ಹೇಳಿದರು.

ರಾಜ್ಯದಲ್ಲಿ ಡೊಮೆಸ್ಟಿಕ್ ಸಿಲಿಂಡರ್ ಸಮಸ್ಯೆ ಉಂಟಾಗಿಲ್ಲ. ಎಷ್ಟು ಪೂರೈಕೆ ಮಾಡಬೇಕು ಅಷ್ಟು ಆಗಿದೆ.

4ನೇ ಪುಟಕ್ಕೆ

## ಭೀಮಪುರ; ಉಚಿತ ಆರೋಗ್ಯ ತಪಾಸಣೆ ಶಿಬಿರ

ನೈಜ್ಯ ದೇಸೆ ನ್ಯೂಸ್

**ಆಳಂದ: ತಾಲ್ಲೂಕಿನ ಭೀಮಪುರ ಗ್ರಾಮದಲ್ಲಿ ಸಾಂಫ್ಟಿ ಮೂವರ್ಸ್ ಫ್ಯೂಚರ್ ರಿನ್ಯೂವಬಲ್ಸ್ ಹಾಗೂ ಜೀವನ ಪ್ರಕಾಶ್ ಚಾರಿಟೇಬಲ್ ಸೊಸೈಟಿ ವತಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು.**



ಶಿಬಿರದಲ್ಲಿ ಹೃದಯ ಸಂಬಂಧಿ ಕಾಯಿಲೆಗಳ, ರಕ್ತದೊತ್ತಡ, ಜ್ವರ, ಶೀತ, ಕೆಮ್ಮು ಸೇರಿದಂತೆ ಇಎನ್‌ಟಿ ತಪಾಸಣೆ ನಡೆಸಿದರು. ಅಗತ್ಯವಿರುವವರಿಗೆ ಉಚಿತವಾಗಿ ಔಷಧಿಗಳನ್ನು ವಿತರಿಸಿದರು. ಈ ಸಂದರ್ಭದಲ್ಲಿ ಸಿ.ಎಚ್.ಒ, ಅನಿಲ್,ಶೇರಿಕರ್, ಪೀರ್ ಸಾಬ್ ,ಗ್ರಾಪಂ ಸದಸ್ಯರಾದ ಫಕ್ರುದ್ದೀನ್, ಹಾಗೂ ಆಶಾ ಕಾರ್ಯಕರ್ತೆ ಮಲ್ಲಮ್ಮ, ಹಾಗೂ ಜೀವನ್ ಪ್ರಕಾಶ್ ಚಾರಿಟೇಬಲ್ ಸೊಸೈಟಿ ಸಂಯೋಜಕರಾದ ಪವನ್ ಕುಮಾರ್ ಸೇರಿದಂತೆ ಇತರರು ಉಪಸ್ಥಿತರಿದ್ದರು. ನೂರು ಕ್ಕಿಂತ ಹೆಚ್ಚು ಜನರು ಶಿಬಿರ ಪ್ರಯೋಜನ ಪಡೆದರು.

## ಕೃಷಿ ಇಲಾಖೆಯ 945 ಹುದ್ದೆಗಳ ನೇಮಕಾತಿ ಸದ್ಯದಲ್ಲೇ ಪೂರ್ಣ :ಸಚಿವ ಚೆಲುವರಾಯಸ್ವಾಮಿ

ನೈಜ್ಯ ದೇಸೆ ನ್ಯೂಸ್

**ಬೆಂಗಳೂರು: ಕೃಷಿ ಇಲಾಖೆಯಲ್ಲಿ ಖಾಲಿ ಇರುವ 945 ಹುದ್ದೆಗಳಿಗೆ ಮೂರ್ನಾಲ್ಕು ತಿಂಗಳಲ್ಲಿ ನೇಮಕಾತಿ ಪೂರ್ಣಗೊಳಿಸುವುದಾಗಿ ಕೃಷಿ ಸಚಿವ ಎನ್. ಚೆಲುವರಾಯಸ್ವಾಮಿ ತಿಳಿಸಿದರು. ವಿಧಾನಸಭೆಯ ಪ್ರಶ್ನೋತ್ತರದ ಅವಧಿಯಲ್ಲಿ ಕುಂದಾಪುರ ಶಾಸಕ ಕಿರಣ ಕುಮಾರ ಕೊಡ್ಗಿ ಕೇಳಿದ ಪ್ರಶ್ನೆಗೆ ಉತ್ತರ ನೀಡಿದ ಸಚಿವರು, 2018ರಲ್ಲಿ ಕೃಷಿ ಇಲಾಖೆಗೆ 370 ಜನರನ್ನು ನೇಮಕ ಮಾಡಿಕೊಳ್ಳಲಾಗಿತ್ತು.**

ಅನಂತರ 2023ರವರೆಗೆ ಯಾವುದೇ ನೇಮಕಾತಿಗಳಾಗಿಲ್ಲ. ತಮ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ 945 ಹುದ್ದೆಗಳ ನೇಮಕಾತಿಗೆ ಆರ್ಥಿಕ ಇಲಾಖೆಯಿಂದ ಒಂದು ವರ್ಷದ ಹಿಂದೆಯೇ ಆರ್ಥಿಕ ಇಲಾಖೆಯಿಂದ ಅನುಮತಿ ಪಡೆಯಲಾಗಿದೆ. ಆದರೆ ಒಳ ಮೀಸಲಾತಿಯ ಗೊಂದಲದಿಂದಾಗಿ



ನೇಮಕಾತಿ ಪೂರ್ಣಗೊಂಡಿಲ್ಲ ಎಂದು ಹೇಳಿದರು. ಕೃಷಿ ಅಧಿಕಾರಿ ಹುದ್ದೆಗಳಿಗೆ 128, ಸಹಾಯಕ ಕೃಷಿ ಅಧಿಕಾರಿಗಳ ಹುದ್ದೆಗೆ 817, ಪ್ರಥ–ಮ ದರ್ಜೆ ಸಹಾಯಕರ ಹುದ್ದೆಗೆ 61, ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ 17 ಮಂದಿಯ ನೇಮಕಾತಿಗೆ ಅನುಮತಿ ದೊರೆತಿ–ದೆ. ಮೂರ್ನಾಲ್ಕು ತಿಂಗಳಲ್ಲೇ ಈ ಹುದ್ದೆಗಳ ನೇಮಕಾತಿಗೆ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. ಸಿಬ್ಬಂದಿಗಳ ಕೊರತೆಯಿಂದಾಗಿ ಕೃಷಿ ಚಟುವಟಿಕೆಗಳಿಗೆ ತೊಂದರೆಯಾಗದಂತೆ ಎಚ್ಚರಿಕೆ ವಹಿಸಲಾಗಿದೆ. ರಾಷ್ಟ್ರೀಯ ಆಹಾರ ಭದ್ರತಾ ಯೋಜನೆ ಅಡಿಯಲ್ಲಿ ಸಹಾಯಕ ತಾಂತ್ರಿಕ ಸೇವೆಯನ್ನು ಹಾಗೂ ಆತ ಯೋಜನೆಯಲ್ಲಿ ಸುಮಾರು 2 ಸಾವಿರ ಸಿಬ್ಬಂದಿಯನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲಾಗಿದೆ.

ಜೊತೆಗೆ ಡಿ ಗ್ರೂಪ್ ಅಡಿ 620 ಮಂದಿ ಹೊರಗುತ್ತಿಗೆಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ವಿವರಿಸಿದರು. ಕಾಲಕಾಲಕ್ಕೆ ನೇಮಕಾತಿಗಳನ್ನು ಕೈಗೊಂಡಿದ್ದರೆ ಸಮಸ್ಯೆ ಆಗುತ್ತಿರಲಿಲ್ಲ. ಆದರೆ 2018 ರಿಂದ 23ರ ನಡುವೆ ಬಿಜೆಪಿ– ಜೆಡಿಎಸ್ ಸರ್ಕಾರಗಳು ಆಡಳಿತದಲ್ಲಿದ್ದವು. ಆದರೆ ನೇಮಕಾತಿಗಳನ್ನು ಕಡೆಗಣಿಸಲಾಗಿತ್ತು ಎಂದು ಹೇಳಿದರು. ಬಿಜೆಪಿಯ ಶಾಸಕ ವಿ.ಸುನಿಲ್‌ಕುಮಾರ್ ಸಿಬ್ಬಂದಿಗಳ ಕೊರತೆಯ ನಡುವೆಯೂ ಕೃಷಿ ಚಟುವಟಿ–ಕೆಗಳಿಗೆ ತೊಂದರೆಯಾಗದಂತೆ ಕಾರ್ಯ ನಿರ್ವಹಿಸಲಾಗುತ್ತಿದೆ ಎಂದು ಸಚಿವರು ಹೇಳಿದ್ದಾರೆ. ಪರಿಸ್ಥಿತಿ ಆಗಿಲ್ಲ ರೈತರು ಹೊಂದಿಕೊಂಡಿದ್ದಾರೆ, ಅಧಿಕಾರಿ ಸಿಬ್ಬಂದಿಗಳಿಲ್ಲದೆ ಇದ್ದರೂ ತಮ ಕೃಷಿ ಚಟುವಟಿಕೆಗಳನ್ನು ತಾವೇ ನಿರ್ವಹಿಸುತ್ತಿದ್ದಾರೆ.

ಒಂದು ವೇಳೆ ಇರುವಷ್ಟು ಸಿಬ್ಬಂದಿಗಳಲ್ಲೇ ಕೃಷಿ ಇಲಾಖೆಯನ್ನು ನಿರ್ವಹಣೆ ಮಾಡಬಹುದು ಎಂದಾದರೆ, ಹೊಸ ಸಿಬ್ಬಂದಿಗಳ ನೇಮಕಾತಿಗೆ ಆರ್ಥಿಕ ಇಲಾಖೆ ಅನುಮತಿ ಕೊಟ್ಟಿರುವುದಾದರೂ ಏಕೆ? ಎಂದು ಪ್ರಶ್ನಿಸಿದರು. ಶಾಸಕರಾದ ಅರಗ ಜ್ಞಾನೇಂದ್ರ ಈ ಹಿಂದೆ ಹೈಬ್ರಿಡ್ ಭತ್ತದ ತಳಿ ಮತ್ತು ಹೊಸ ರಸಗೊಬ್ಬರಗಳನ್ನು ಪರಿಚಯಿಸುವಾಗ ಕೃಷಿ ಅಧಿಕಾರಿಗಳು ರೈತರ ಜಮೀನಿನ ಬದುಗಳ ಮೇಲೆ ನಿಂತು ಸಲಹೆ ನೀಡುತ್ತಿದ್ದರು. ಈಗ ಆ ರೀತಿಯ ಕೆಲಸಗಳಾಗುತ್ತಿಲ್ಲ ಎಂದು ಸಚಿವರ ಗಮನ ಸೆಳೆದರು.

## ನಾಲೆಗೆ ಕಾಲುಜಾರಿ ಬಿದ್ದ ಬಾಲಕ, ಅಗ್ನಿಶಾಮಕ ದಳದಿಂದ ಹುಡುಕಾಟ

ನೈಜ್ಯ ದೇಸೆ ನ್ಯೂಸ್

**ಲಿಂಗಸಗೂರು: ತಾಲ್ಲೂಕಿನ ರೋಡಲಬಂಡ – ಜಾವೂರ ಹತ್ತಿರದ ನಾರಾಯಣಪುರ ಬಲದಂಡೆ ನಾಲೆಯಲಿ ಬಾಲಕ ಕಾಲುಜಾರಿ ಬಿದ್ದ ಘಟನೆ ಜರುಗಿದ್ದು ಅಗ್ನಿ ಶಾಮಕದಳದಿಂದ ಹುಡುಕಾಟ ನಡೆಸಿದ್ದಾರೆ.**

ಬುಧವಾರ ಬೆಳಗ್ಗೆ ಬಾಲಕ ದಶರಥ ತಂದೆ ರಮೇಶ ಜವಳಗೇರಾ ವಯಸ್ಸು 9 ವರ್ಷ ದ ಬಾಲಕ ಜಾವೂರ ಹತ್ತಿರದ ಬಹಿರ್ದೇಶಗೆ ಹೋಗಿ ನಾಲೆಯಲಿ ಕೈಕಾಲು ತೊಳೆಯಲು ನಾಲೆಗೆ ಇಳಿದಾಗ ಕಾಲುಜಾರಿ ಬಿದ್ದಿದ್ದಾನೆಂದು



ಹೇಳಲಾಗುತಿದ್ದು ನಾಲೆಯಲಿ ಮುಳುಗಿದ ಬಾಲಕನ ಶವದ ಹುಡುಕಾಟವನ್ನು ಅಗ್ನಿಶಾಮಕ ದಳದಿಂದ ನಡೆದಿದೆ.

ಮೂಲತ ಬಾಲಕನ ಊರು ಸಿಂಧನೂರು ತಾಲೂಕಿನ ಜವಳಗೇರಾ ಎಂದು ಹೇಳಲಾಗುತಿದ್ದು ಕೆಲವೆ ದಿನದ ಹಿಂದೆ ಬಾಲಕನ ತಂದೆ ಮೃತಪಟ್ಟಿದ್ದು ತಾಯಿಯ ತವರುಮನೆಯಾದ ಜಾವೂರಗೆ ಬಂದಿದ್ದರೆಂದು ಹೇಳಲಾಗುತಿದ್ದು ಇಂದು ಬೆಳಗ್ಗೆ ಬಾಲಕ ಕಾಲುಜಾರಿ ನಾಲೆಗೆ ಬಿದ್ದ ಸುದ್ದಿ ಕುಟುಂಬಕ್ಕೆ ಬರಸಿಡಿಲು ಬಡಿದಂತಾಗಿದೆ ಘಟನೆ ನಡೆದ ಸ್ಥಳದಲಿ ಸಾಕಷ್ಟು ಜನಸೇರಿದ್ದು ಕಂಡುಬಂತು.

## ಆದರ್ಶ ವಿದ್ಯಾಲಯ ಅರಕೇರಾ ಪರೀಕ್ಷೆ ಕೇಂದ್ರದಲ್ಲಿ ವಿದ್ಯಾರ್ಥಿಗಳಿಗೆ ಗುಲಾಬಿ ನೀಡಿ ಸ್ವಾಗತ

ನೈಜ್ಯ ದೇಸೆ ನ್ಯೂಸ್

**ಅರಕೇರಾ: ತಾಲೂಕಿನ ಸರಕಾರಿ ಆದರ್ಶ ವಿದ್ಯಾಲಯದಲ್ಲಿ ಎಸ್ ಎಸ್ ಎಲ್ ಸಿ ಪರೀಕ್ಷೆ ಇಂದಿನಿಂದ ಪರೀಕ್ಷೆ ಪ್ರಾರಂಭವಾಗಿದ್ದು ಕನ್ನಡ ವಿಷಯ ಪರೀಕ್ಷೆಗೆ ಹುಮ್ಮಸ್ಸಿನಿಂದ ವಿದ್ಯಾರ್ಥಿಗಳು ಪರೀಕ್ಷೆ ಕೇಂದ್ರಕ್ಕೆ ಆಗಮಿಸಿದ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಗುಲಾಬಿ ಹೂ ನೀಡುವ ಮುಖಾಂತರ, ಪರೀಕ್ಷಾ ಕೇಂದ್ರಕ್ಕೆ ಸ್ವಾಗತಿಸಿದರು.**

ಈ ಸಂದರ್ಭದಲ್ಲಿ ಯಲ್ಲನಗೌಡ ಪಾಟೀಲ್ ಮಾರ್ಗಧಿಕಾರಿಗಳು ಪರೀಕ್ಷೆ ಅಧಿಕ್ಷಕರು ಹುಸೇನ್ ಬಾಷಾ. ಪರೀಕ್ಷಾ ಕೇಂದ್ರ ಜಾಗೃತ ಅಧಿಕಾರಿಗಳಾದ ಸಿದ್ದಮ್ಮ ವಲಯ ಸಂಪನ್ಮೂಲ ಅಧಿಕಾರಿಯಾದದ ಬಸವರಾಜ ನಾಯಕ ಸಾತಲ್ ಶಾಲಾ



ಮುಖ್ಯೋಪಾಧ್ಯಾಯರಾದ ಶಿವಪುತ್ರಪ್ಪ ಇಲಾಖೆ ರಾಚನಗೌಡಮಾಲಿಪಾಟೀಲ್ ದೇವದತ್ತ ಎಸ್ ಡಿ ಎ.ಹಾಗೂ ಪೋಲೀಸ್ ಸಿಬ್ಬಂದಿಗಳು ಆರೋಗ್ಯ ಕುಟುಂಬ ಕಲ್ಯಾಣ ಆರೋಗ್ಯ ನೀರಿಕ್ಷಕ ಅಧಿಕಾರಿಗಳು ಆಶಾ ಕಾರ್ಯಕರ್ತೆಯರು ಉಪಸ್ಥಿತರಿದ್ದರು.

# ಭಗವಾನ್ ಮಹಾವೀರ ಜಯಂತಿ ಆಚರಣೆ; ಪೂರ್ವಭಾವಿ ಸಿದ್ಧತಾ ಸಭೆ

ನೈಜ್ಯ ದೇಸೆ ನ್ಯೂಸ್

**ರಾಯಚೂರು: ಇಲ್ಲಿನ ಜಿಲ್ಲಾಡಳಿತದಿಂದ ಇದೇ ಮಾರ್ಚ್ 31ರ ಮಂಗಳವಾರ ದಂದು ಸರ್ಕಾರದ ಆದೇಶದಂತೆ ಭಗವಾನ್ ಮಹಾವೀರ ಅವರ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.**

ಮಾರ್ಚ್ 17ರ ಮಂಗಳವಾರ ದಂದು ನಗರದ ನೂತನ ಜಿಲ್ಲಾಧಿಕಾ–ರಿಗಳ ಕಚೇರಿಯ ಸಭಾಂಗಣದಲ್ಲಿ ಭಗವಾನ್ ಮಹಾವೀರ ಜಯಂತಿ ಕು–ರಿತು ನಡೆದ ಪೂರ್ವಭಾವಿ ಸಭೆ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಭಗವಾನ್ ಮಹಾವೀರ ಅವರ ಭಾವಚಿತ್ರಕ್ಕೆ ಪುಷ್ಪಹಾರ ಸಮರ್ಪಣೆ, ಪುಷ್ಪ ನಮನಗಳನ್ನು ಸಲ್ಲಿಸಿದ ಬಳಿಕ ಅಂದು ಬೆಳಿಗ್ಗೆ 08:30ಕ್ಕೆ ನಗರದ ಜೈನ್ ಮಂದಿರದಿಂದ ಮೆರವಣಿಗೆ ಹೊರಟು ಸೂಪರ್ ಮಾರ್ಕೆಟ್, ತೀನ್ ಕಂದಿಲ್, ಬಟ್ಟೆ ಬಜಾರ್, ಮಹಾವೀರ ವೃತ್ತದ ಮುಖಾಂತರ ಜೈನ್ ಮಂದಿರಕ್ಕೆ ಬಂದು ಸೇರಲಿದೆ. ನಂತರ ಬೆಳಿಗ್ಗೆ 11 ಗಂಟೆಗೆ ಜೈನ್ ಮಂದಿರದ ಆರಾಧನ ಸಭಾ ಭವನದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ.

ಮೆರವಣಿಗೆ ಮತ್ತು ವೇದಿಕೆಯ ಕಾರ್ಯಕ್ರಮಕ್ಕೆ ಸಂಬಂಧಿಸಿದ ಅಧಿಕಾ–ರಿಗಳು ಅಗತ್ಯ ಸಿದ್ಧತೆ ಕೈಗೊಳ್ಳಬೇಕು ಎಂದು ಸೂಚನೆ ನೀಡಿದರು.




ಭಗವಾನ್ ಮಹಾವೀರ ಅವರ ವೃತ್ತವನ್ನು ಅಲಂಕಾರಗೊಳಿಸಬೇಕು. ವಿದ್ಯುತ್ ದೀಪಾಲಂಕಾರ ಮಾಡಬೇಕು. ಶಾಮಿಯಾನ, ಆಸನಗಳು, ಧ್ವನಿವರ್ಧಕ, ಕುಡಿಯುವ ನೀರು, ರಥದ ಸಿದ್ಧತೆ ಹಾಗೂ ಜೈನ್ ಮಂದಿರ ಸುತ್ತ–ಮುತ್ತ ಸ್ವಚ್ಛತೆ, ಕುಡಿಯುವ ನೀರಿನ ಟ್ಯಾಂಕರ್ ಇತ್ಯಾದಿ ವ್ಯವಸ್ಥೆಗಳನ್ನು ರಾಯಚೂರು ಮಹಾನಗರ ಪಾಲಿಕೆಯ ಸಂಬಂಧಿಸಿದ ಅಧಿಕಾರಿಗಳು ಮಾಡಬೇಕೆಂದು ಅಪರ ಜಿಲ್ಲಾಧಿಕಾರಿಗಳು ಸೂಚಿಸಿದರು. ಶ್ರೀಮತಿ ಪ್ರೇಮಲತಾ ಹರದರೆ ರಾಯಚೂರು ಅವರಿಂದ ಉಪನ್ಯಾಸ ನಡೆಸಲು ಸಭೆಯಲ್ಲಿ ಒಮ್ಮತದ ತೀರ್ಮಾನ ಮಾಡಲಾಯಿತು.

ಭಗವಾನ್ ಮಹಾವೀರ ಜಯಂತಿ ಕಾರ್ಯಕ್ರಮದ ಆಮಂತ್ರಣ ಪತ್ರಿಕೆಯನ್ನು ಶಿಷ್ಟಾಚಾರದಂತೆ ಮುದ್ರಿಸಿ ವಿತರಿಸಲು ಸೂಚನೆ ನೀಡಲಾಯಿತು. ಜಯಂತಿ ಆಚರಣೆಯನ್ನು ಎಲ್ಲಾ ಇಲಾಖೆಗಳಲ್ಲಿ, ತಾಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಹಾಗೂ ಶಾಲಾ ಕಾಲೇಜುಗಳಲ್ಲಿ ಕಡ್ಡಾಯವಾಗಿ ಆಚರಿಸಲು ಸಂಬಂಧಿಸಿದ ಅಧಿಕಾ–ರಿಗಳು ಅಗತ್ಯ ಕ್ರಮವಹಿಸಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ಅಪರ ಜಿಲ್ಲಾಧಿಕಾರಿಗಳು ಸೂಚಿಸಿದರು.

ಇದಕ್ಕೂ ಮುಂಚೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕಿ ಉತ್ತರಾದೇವಿ ಅವರು ಸಭೆಗೆ ಆಗಮಿಸಿದ ಸರ್ವರನ್ನೂ ಸ್ವಾಗತಿಸಿದರು. ಇದೇ ಸಂದರ್ಭದಲ್ಲಿ ಮಹಾವೀರ ಹಾರದಾರ್, ಅಶೋಕ ಲೋದಾ, ಎಸ್. ಎಸ್.ಜೈನ್ ಸಾವ್, ಗೌತಮಿ ಗಿಯ್, ರಾಜೇಂದ್ರ ಕುಮಾರ್, ಅಶೋಕ ಕುಮಾರ್ ಸಿ.ಕೆ ಜೈನ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ಇದ್ದರು.

## ಸಾಹಿತ್ಯ ಸಿಂಚನ

ಯುಗಾದಿ
ಹೊಸ ವರ್ಷ ದೀಪದಂತೆ ಬೆಳಗಲಿ,
ಯುಗಾದಿ ಹಬ್ಬವು ಸಂತಸದ ನಾದಲಿ.
ಬೆವು–ಬೆಲ್ಲದ ರುಚಿಯಲಿ ಜೀವನ,
ಸುಖ–ದುಃಖಗಳ ಸಮತೋಲನದ ಪಾಠವನ.

ಮನೆಮನಗಳಲ್ಲಿ ಹಾಸುಹೊಕ್ಕು ಹರ್ಷ,
ಹೊಸ ಕನಸುಗಳಿಗೆ ಇಂದು ಸಿಗಲಿ ದಾರಿಶೋಧ.
ಹಸಿರು ತೋಟದ ಹೂವಿನ ನಗುತ,
ಪ್ರತಿ ಹೃದಯವೂ ಆಶೆಯಿಂದ ತುಂಬುತ.

ಬೇಸಿಗೆಯ ಗಾಳಿಯಲಿ ಹಬ್ಬದ ಸುವಾಸನೆ,
ಹೊಸ ಆರಂಭದಲಿ ಬೆಳಗಲಿ ಪ್ರತಿ ಕ್ಷಣವೆ.
ಯುಗಾದಿ ಹಬ್ಬದ ಶುಭಾಶಯಗಳ ಸುರಿಮಳೆ,
ನಿಮ್ಮ ಜೀವನವಿರಲಿ ಸದಾ ಸುಖಮಯವೆ

ಯುಗಾದಿ ಹಬ್ಬದ ಹಾರ್ದಿಕ ಶುಭಾಶಯಗಳು!

ಅಮರೇಶ್

# ಜಿಲ್ಲಾಡಳಿತದಿಂದ ಮಾರ್ಚ್ 23ರಂದು ದೇವರ ದಾಸಿಮಯ್ಯ ಜಯಂತಿ

ನೈಜ್ಯ ದೆಸೆ ನ್ಯೂಸ್



ರಾಯಚೂರು: ಇಲ್ಲಿನ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಆದ್ಯ ವಚನಕಾರ ನೇಕಾರ ಸಂತ ವಿಶ್ವಮಾನ್ಯ ಶರಣ ದೇವರ ದಾಸಿಮಯ್ಯ ಅವರ ಜಯಂತಿ ಕಾರ್ಯಕ್ರಮವು ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಮಾರ್ಚ್ 23ರ ಬೆಳಿಗ್ಗೆ 11ಕ್ಕೆ ಹಮ್ಮಿಕೊಳ್ಳಲಾಗಿದೆ.

ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಅವರು ಉದ್ಘಾಟನೆ ನೆರವೇರಿಸುವರು. ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು ಅವರು ಘನ ಉಪಸ್ಥಿತಿ ವಹಿಸುವರು. ರಾಯಚೂರು ನಗರ ಕ್ಷೇತ್ರದ ಶಾಸಕರಾದ ಡಾ.ಎಸ್.ಶಿವರಾಜ ಪಾಟೀಲ್ ಅವರು ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷರು ಆಗಿರುವ ಮಸ್ಕಿ ಕ್ಷೇತ್ರದ ಶಾಸಕರಾದ ಆರ್.ಬಸನಗೌಡ ತುರ್ವಿಹಾಳ, ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ಸಿಂಧನೂರು ಕ್ಷೇತ್ರದ ಶಾಸಕರಾದ ಹಂಪನಗೌಡ ಬಾದರ್ಲಿ, ಹಟ್ಟಿ ಚಿನ್ನದ ಗಣಿ ನಿಯಮಿತದ ಅಧ್ಯಕ್ಷರು ಆಗಿರುವ ಬೀಳಗಿ ಕ್ಷೇತ್ರದ ಶಾಸಕರಾದ ಜೆ.ಟಿ.ಪಾಟೀಲ್, ರಾಯಚೂರು ಲೋಕಸಭಾ ಸದಸ್ಯರಾದ ಜಿ.ಕುಮಾರ ನಾಯಕ, ಕೊಪ್ಪಳ ಲೋಕಸಭಾ ಸಂಸದರಾದ ಕೆ.ರಾಜಶೇಖರ ಹಿಟ್ನಾಳ,

ಮಾನವಿ ಕ್ಷೇತ್ರದ ಶಾಸಕರಾದ ಜಿ.ಹಂಪಯ್ಯ ನಾಯಕ, ಲಿಂಗಸಗೂರು ಕ್ಷೇತ್ರದ ಶಾಸಕರಾದ ಮಾನಪ್ಪ ಡಿ.ವಜ್ಜಲ್, ದೇವದುರ್ಗ ಕ್ಷೇತ್ರದ ಶಾಸಕರಾದ ಕರೆಮ್ಮ ಜಿ.ನಾಯಕ, ವಿಧಾನ ಪರಿಷತ್ ಶಾಸಕರಾದ ಶಶೀಲ್ ಜಿ.ನಮೋಷಿ, ವಿಧಾನ ಪರಿಷತ್ ಶಾಸಕರಾದ ಚಂದ್ರಶೇಖರ್ ಬಿ.ಪಾಟೀಲ್, ವಿಧಾನ ಪರಿಷತ್ ಶಾಸಕರಾದ ಶರಣಗೌಡ ಪಾಟೀಲ ಬಯ್ಯಾಪುರ, ಎ.ವಸಂತಕುಮಾರ, ಬಸನಗೌಡ ಬಾದರ್ಲಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಗೌಡ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ರಾಜಶೇಖರ ರಾಮಸ್ವಾಮಿ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪಾಮಯ್ಯ ಮುರಾರಿ, ರಾಯಚೂರು ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪವನ್ ಕಿಶೋರ್ ಪಾಟೀಲ್,

ಆರ್ಥಿಕ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ರಿತೇಶಕುಮಾರ ಸಿಂಗ್, ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರಾದ ಜಹೀರಾ ನಸೀಮ್, ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ ಕುಮಾರ್ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಗ್ಶು ಗಿರಿ., ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ ಅವರು ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಬಾಗಿಯಾಗಲಿದ್ದಾರೆ. ಮಾನ್ವಿ ಸಾಹಿತಿ ರಮೇಶ ಬಾಬು ಅವರು ದೇವರ ದಾಸಿಮಯ್ಯ ಜಯಂತಿಯಲ್ಲಿ ಉಪನ್ಯಾಸ ನೀಡಲಿದ್ದಾರೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಉತ್ತರಾದೇವಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಉಪಚುನಾವಣೆ: ವಿವಿಧ ರಾಜಕೀಯ ಪಕ್ಷದ ಪ್ರತಿನಿಧಿಗಳೊಂದಿಗೆ ಸಭೆ

ನೈಜ್ಯ ದೆಸೆ ನ್ಯೂಸ್

ವಿಧಾನಸಭಾ ಕ್ಷೇತ್ರದ ಉಪಚುನಾವಣೆ ಹಿನ್ನೆಲೆಯಲ್ಲಿ ಜಾರಿಯಾದ ಮಾದರಿ ನೀತಿ ಸಂಹಿತೆಯನ್ನು ಎಲ್ಲ ರಾಜಕೀಯ ಪಕ್ಷಗಳು ಕಟ್ಟುನಿಟ್ಟಾಗಿ ಪಾಲಿಸಬೇಕು' ಎಂದು ಜಿಲ್ಲಾ ಚುನಾವಣಾಧಿಕಾರಿ ಸಂಗಪ್ಪ ಹೇಳಿದರು.ಇಲ್ಲಿನ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ಜರುಗಿದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.



ಚುನಾವಣಾ ಆಯೋಗ ಜಾರಿಗೊಳಿಸಿದ ಮಾದರಿ ನೀತಿ ಸಂಹಿತೆಯನ್ನು ಕಟ್ಟುನಿಟ್ಟಾಗಿ ಪಾಲಿಸುವುದರ ಜೊತೆಗೆ ಮುಕ್ತ, ನ್ಯಾಯಸಮ್ಮತ ಚುನಾವಣೆ ನಡೆಸಲು ಎಲ್ಲರೂ ಸಹಕರಿಸಬೇಕು' ಎಂದು ತಿಳಿಸಿದರು. 'ಚುನಾವಣಾ ವೇಳಾಪಟ್ಟಿಯಂತೆ ಈಗಾಗಲೇ ಅಧಿಸೂಚನೆ ಹೊರಡಿಸಲಾಗಿದೆ. ನಾಮಪತ್ರ ಸಲ್ಲಿಕೆಗೆ ಮಾರ್ಚ್ 23 ಕೊನೆ ದಿನವಾಗಿದೆ. 24ಕ್ಕೆ ನಾಮಪತ್ರಗಳ ಪರಿಶೀಲನೆ ನಡೆಯಲಿದ್ದು, ನಾಮಪತ್ರ ಹಿಂಪಡೆಯಲು ಮಾರ್ಚ್ 26 ಕೊನೆ ದಿನ. ಏಪ್ರಿಲ್ 9ರಂದು ಮತದಾನ ನಡೆಯಲಿದ್ದು, ಮೇ 4ರಂದು ಮತ ಎಣಿಕೆ ನಡೆಯಲಿದೆ. ಚುನಾವಣೆ ಪ್ರಕ್ರಿಯೆ ಮುಕ್ತಾಯ ಆಗುವವರೆಗೂ ನೀತಿ ಸಂಹಿತೆ ಜಾರಿಯಲ್ಲಿರುತ್ತದೆ' ಎಂದರು. ಹೆಚ್ಚುವರಿ ಜಿಲ್ಲಾಧಿಕಾರಿ ಅಶೋಕ ತೇಲಿ, ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ, ತಹಶೀಲ್ದಾರ್‌ಗಳಾದ ವಾಸುದೇವ ಸ್ವಾಮಿ, ಪ್ರದೀಪಕುಮಾರ ಸೇರಿದಂತೆ ವಿವಿಧ ರಾಜಕೀಯ ಪಕ್ಷದ ಪ್ರತಿನಿಧಿಗಳು ಉಪಸ್ಥಿತರಿದ್ದರು. 'ನ್ಯಾಯಸಮ್ಮತ ಚುನಾವಣೆಗೆ ಸಹಕರಿಸಿ' 'ಅಭ್ಯರ್ಥಿಗಳು ಹಾಗೂ ರಾಜಕೀಯ ಪಕ್ಷದವರು ಸಭೆ ರ್‍ಯಾಲಿ ವಾಹನಗಳಿಗೆ ತಾತ್ಕಾಲಿಕ ಪಕ್ಷದ ಕಚೇರಿಗೆ ಧ್ವನಿವರ್ಧಕಗಳಿಗೆ ಹೆಲಿಪ್ಯಾಡ್ ಹಾಗೂ ಹೆಲಿಕ್ಯಾಪ್ಟರ್ ಹಾರಾಟಕ್ಕೆ ಅನುಮತಿ ಪಡೆದುಕೊಳ್ಳಬೇಕು. ನೀತಿ ಸಂಹಿತೆ ಉಲ್ಲಂಘನೆ ಆಗದಂತೆ ನೋಡಿಕೊಳ್ಳಬೇಕು' ಎಂದು ಎಂಸಿಸಿ ಜಿಲ್ಲಾ ನೋಡಲ್ ಅಧಿಕಾರಿ ಶಶಿಧರ ಕುರೇರ ತಿಳಿಸಿದರು. 'ಆಯೋಗವು ಸಿವಿಜಿಲ್ ಮೊಬೈಲ್ ಆಯಪ್ ಮೂಲಕ ಚುನಾವಣೆ ಅಕ್ರಮಕ್ಕೆ ಸಂಬಂಧಿಸಿದಂತೆ ದೂರುಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಿದೆ. ದೂರುಗಳ ಬಗ್ಗೆ ಮಾದರಿ ನೀತಿ ಸಂಹಿತೆ ತಂಡಕ್ಕೆ ಆನ್‌ಲೈನ್ ಮುಖಾಂತರ ತಿಳಿಸುವುದರ ಜೊತೆಗೆ ನಿಗದಿಪಡಿಸಿದ ಸಮಯದೊಳಗೆ ಕ್ರಮ ಜರುಗಿಸಲಾಗುತ್ತದೆ. ಮುಕ್ತ ನ್ಯಾಯಸಮ್ಮತ ಚುನಾವಣೆ ನಡೆಸಲು ಸಹಕರಿಸಬೇಕು' ಎಂದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಮಸ್ಕಿ ಕುಡಿಯುವ ನೀರಿನ ಕೆರೆ 5 ದಿನದೊಳಗೆ ಸಂಪೂರ್ಣ ಭರ್ತಿ–ಪುರಸಭೆ ಮುಖ್ಯಾಧಿಕಾರಿ ನರಸರಡ್ಡಿ



ನೈಜ್ಯ ದೆಸೆ ನ್ಯೂಸ್

ಮಸ್ಕಿ: ಪಟ್ಟಣದ ತುಂಗಭದ್ರಾ ಎಡದಂಡೆ ನಾಲೆಯ ಪಕ್ಕದಲ್ಲಿರುವ ಶಾಶ್ವತ ಕುಡಿಯವ ನೀರಿನ ಕೆರೆ 5 ದಿನಗಳ ಒಳಗಾಗಿ ಸಂಪೂರ್ಣ ಭರ್ತಿಯಾಗಲಿದೆ ಎಂದು ಪುರಸಭೆ ಮುಖ್ಯಾಧಿಕಾರಿ ನರಸರಡ್ಡಿ ಹೇಳಿದರು.

ಎಡದಂಡೆ ನಾಲೆಯಿಂದ ಕೆರೆಗೆ ನೀರು ತುಂಬಿಸುವ ಸ್ಥಳಕ್ಕೆ ಬುಧವಾರ ಭೇಟಿ ನೀಡಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಪಟ್ಟಣದ 23 ವಾರ್ಡುಗಳ ನಿವಾಸಿಗಳಿಗೆ ಬೇಸಿಗೆಯಲ್ಲಿ ಕುಡಿಯುವ ನೀರಿನ ತೊಂದರೆಯಾಗದಂತೆ ಮುನ್ನೆಚ್ಚರಿಕೆ ಕ್ರಮವಹಿಸಲಾಗಿದೆ. ಸುಮಾರು 30 ಹೆಚ್‌ಪಿ ಸಮರ್ಥ್ಯದ 8 ಮೋಟಾರುಗಳಿಂದ ಕೆರೆಗೆ ನೀರು ಹರಿಸಲಾಗುತ್ತಿದೆ. ಸತತವಾಗಿ 8 ಮೋಟಾರುಗಳು ಹಗಲು–ರಾತ್ರಿ ನಡೆದರೆ 5 ದಿನಗಳ ಒಳಗಾಗಿ ಕೆರೆ ಸಂಪೂರ್ಣ ಭರ್ತಿಯಾಗಲಿದೆ ಎಂದರು. ಈಗಾಗಲೇ ಬೆಳಿಗ್ಗೆಯಿಂದ ಕೆಲವೊಂದು ವಾರ್ಡುಗಳಿಗೆ ಕಾಲುವೆಯಿಂದ ನೇರವಾಗಿ ನೀರು ಹರಿಸಲಾಗುತ್ತಿದೆ.

ಮಾ.26ರ ವರೆಗೆ ಕಾಲುವೆಯಲ್ಲಿ ನೀರು ಇರುತ್ತವೆ. ಮಾ.26ರ ವರೆಗೆ ಕೆಲವೊಂದು ವಾರ್ಡುಗಳಿಗೆ ಬಳಕೆಗೆ ನೇರವಾಗಿ ಕಾಲುವೆ ನೀರು ಹರಿಸುತ್ತೇವೆ. ಕಾಲುವೆ ನೀರು ಬಂದಾದ ನಂತರ ಕೆರೆಯಿಂದ ನೀರು ಪೂರೈಸಲಾಗುತ್ತದೆ. ಬೇಸಿಗೆಯಲ್ಲಿ ಪಟ್ಟಣದ ಸಾರ್ವಜನಿಕರಿಗೆ ಯಾವುದೇ ರೀತಿಯ ನೀರಿನ ತೊಂದರೆಯಾಗದಂತೆ ಕ್ರಮಕೈಗೊಳ್ಳಲಾಗಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ರವಿಸಿಂಗ್, ರಮೇಶ, ಬಸವಪ್ಪ ಸೇರಿದಂತೆ ವಾಟರ್‌ಮಾನ್‌ಗಳು ಮತ್ತು ಪುರಸಭೆ ಸಿಬ್ಬಂದಿಗಳಿದ್ದರು.

# ರಮಜಾನ್ ಸೌಹಾರ್ದತೆ ಬೆಸೆಯುವ ಮಾಸ: ಉಪಾಧ್ಯಕ್ಷ ವಿರೇಶ


ನೈಜ್ಯ ದೆಸೆ ನ್ಯೂಸ್

ತಾಳಿಕೋಟೆ: ಎಲ್ಲ ಧರ್ಮದ ಜನರ ನಡುವೆ ಸಾಮರಸ್ಯ ಬೆಳೆಸುವ ಆಶಯದಿಂದ ಇಫ್ತಾರ ಕೂಟಗಳನ್ನು ಅಸ್ಕಿ ಫೌಂಡೇಶನ್ ದಿಂದ ಆಯೋಜಿಸಲಾಗಿದೆ ಎಂದು ಪೌಂಡೇಶನ್ ಉಪಾಧ್ಯಕ್ಷ ವಿರೇಶ ಅಸ್ಕಿ ಹೇಳಿದರು.

ತಾಲೂಕಿನ ಬಾವೂರ ಗ್ರಾಮದಲ್ಲಿ ಪವಿತ್ರ ರಮಜಾನ ಮಾಸದ ನಿಮಿತ್ಯ ಅಸ್ಕಿ ಫೌಂಡೇಶನದಿಂದ ಆಯೋಜಿಸಿದ ಸೌಹಾರ್ದ ಇಫ್ತಾರ ಕೂಟ ಕಾರ್ಯಕ್ರಮದಲ್ಲಿ ಅವರು ಮಂಗಳವಾರ ಮಾತನಾಡಿದರು. ಶ್ರಾವಣ ಮಾಸ ಹಿಂದುಗಳಿಗೆ ಹಾಗೂ ರಮಜಾನ್ ತಿಂಗಳು ಮುಸ್ಲಿಂ ಸಮಾಜದವರಿಗೆ ಪವಿತ್ರವಾದ ದಿನಗಳು ಎಲ್ಲರಲ್ಲಿ ಹರಿಯುವ ರಕ್ತ ಒಂದೇ ನಾವೆಲ್ಲರೂ ಸಹೋದರತ್ವ ಭಾವನೆಯಿಂದ ಬದುಕಬೇಕಾಗಿದೆ. ಧರ್ಮ ಮತ್ತು ಆಚರಣೆಗಳು ಭಿನ್ನವಾಗಿದ್ದರೂ ನಾವೆಲ್ಲರೂ ಮನುಷ್ಯರು ನಾವೆಲ್ಲರೂ ಒಂದೇ ಎಂಬ ಭಾವನೆ ಮುಖ್ಯವಾಗಿದೆ ಎಂದರು.




ಸಮಾಜ ಸೇವಕರಾದ ಸಿ.ಬಿ.ಅಸ್ಕಿ ಅವರು ಜಾತಿ ಮತ ಭೇದವಿಲ್ಲದೆ ಎಲ್ಲ ಸಮಾಜದ ಜನರ ಸೇವೆಯನ್ನು ಮಾಡುತ್ತಿದ್ದಾರೆ. ಕಳೆದ 8 ವರ್ಷಗಳಿಂದ ಇಂಥಹ ಸೌಹಾರ್ದ ಇಫ್ತಾರ ಕೂಟಗಳನ್ನು ಆಯೋಜಿಸುತ್ತಾ ಬರುತ್ತಿದ್ದಾರೆ ಇದಕ್ಕೆ ನಿಮ್ಮೆಲ್ಲರ ಸಹಕಾರವೇ ಕಾರಣವಾಗಿದೆ. ಮುಂದೆಯೂ ನಿಮ್ಮ ಈ ಪ್ರೀತಿ ಸಹಕಾರ ಇದೇ ರೀತಿ ಆಗಿರಲಿ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಗಣ್ಯರಾದ ಅಕ್ಬರ್ ಪಟೇಲ ಬಿರಾದಾರ, ಸಯ್ಯದ್ ಪಟೇಲ ಬಿರಾದಾರ,ಶಿವರಾಜ ಗುಂಡಕನಾಳ, ಖಾದೀರಸಾಬ ನಿಡುಗುಂದಿ, ಅಲ್ಲಾಭಕ್ಷ ಬಿರಾದಾರ,ಹುಮಾಯೂನ ತಾರಫರ, ಆಸೀಫ ಕೆಂಭಾವಿ,ಗೋಪಾಲ ಕಟ್ಟಿಮನಿ, ರಾಜೇಶಸಾಬ ನಿಡುಗುಂದಿ, ಬಸೀರ ಅಹ್ಮದ್ ಬೀಳಗಿ ಹಾಗೂ ಮೆಹಬೂಬ ಕಮತಗಿ ಮತ್ತಿತರರು ಇದ್ದರು.



# DHFWS ಸಂಸ್ಥೆಯಲ್ಲಿ 6 ಹುದ್ದೆಗಳ ನೇಮಕಾತಿ.. ಕೂಡಲೇ ಅರ್ಜಿ ಸಲ್ಲಿಸಿ

ನೈಜ್ಯ ದೆಸೆ ನ್ಯೂಸ್

ಕೊಪ್ಪಳದಲ್ಲಿರುವ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘದಲ್ಲಿ (DHFWS Koppal Recruitment 2026) ಖಾಲಿ ಇರುವ 6 ಹುದ್ದೆಗಳ ನೇಮಕಾತಿಗಾಗಿ ಅಧಿಸೂಚನೆ ಹೊರಡಿಸಲಾಗಿದೆ. ಕ್ಲಿನಿಕಲ್ ಸೈಕಾಲಜಿಸ್ಟ್ ಸೇರಿ ಹಲವು ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗುತ್ತಿದೆ. ಆಸಕ್ತ ಅಭ್ಯರ್ಥಿಗಳು ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸುವ ಮೂಲಕ ಉದ್ಯೋಗ ಗಿಟ್ಟಿಸಿಕೊಳ್ಳಬಹುದಾಗಿದೆ. ಕೊಪ್ಪಳ ಜಿಲ್ಲೆಯಲ್ಲಿಯೇ ಉದ್ಯೋಗ ಪಡೆಯಬೇಕು ಎಂದು




ಬಯಸುತ್ತಿರುವವರಿಗೆ ಗುಡ್ ನ್ಯೂಸ್ ಎನಿಸಿದೆ.

ಹುದ್ದೆಗಳ ವಿವರ
ನೇಮಕಾತಿ ಸಂಸ್ಥೆ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕೊಪ್ಪಳ
ಹುದ್ದೆಯ ಹೆಸರು: ಕ್ಲಿನಿಕಲ್ ಸೈಕಾಲಜಿಸ್ಟ್
ಒಟ್ಟು ಹುದ್ದೆಗಳ ಸಂಖ್ಯೆ: 6
ಉದ್ಯೋಗ ಸ್ಥಳ: ಕೊಪ್ಪಳ
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಮಾರ್ಚ್ 25

ಮಾನ್ಯತೆ ಪಡೆದ ಯಾವುದೇ ವಿಶ್ವವಿದ್ಯಾಲಯ ಅಥವಾ ಮಂಡಳಿಗಳಲ್ಲಿ ಪದವಿ, ಸ್ನಾತಕೋತ್ತರ ಪದವಿ, ಎಂಬಿಎ ಮುಗಿಸಿದವರು ಅರ್ಜಿ ಸಲ್ಲಿಸಬಹುದಾಗಿದೆ. ಗರಿಷ್ಠ 45 ವರ್ಷದೊಳಗಿನವರು ಅರ್ಜಿ ಸಲ್ಲಿಸಬಹುದಾಗಿದೆ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ. ಅರ್ಜಿ ಸಲ್ಲಿಸಲು ಅಭ್ಯರ್ಥಿಗಳಿಗೆ ಯಾವುದೇ ಶುಲ್ಕ ಇರುವುದಿಲ್ಲ.

ನೇಮಕಾತಿ ಹೊಂದಿದವರಿಗೆ ಮಾಸಿಕ 30,000 ರೂಪಾಯಿ ವೇತನ ನೀಡಲಾಗುತ್ತದೆ. ಸಂದರ್ಶನದ ಮೂಲಕ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳಲಾಗುತ್ತದೆ. ಅರ್ಜಿ ಸಲ್ಲಿಸುವುದು ಹೇಗೆ? ಮೊದಲಿಗೆ ಅಧಿಕೃತ ವೆಬ್ ಸೈಟ್ ಇಂರಿಂಚಿಟ.ಟುಭಿ.ಟ ಗೆ ಭೇಟಿ ನೀಡಬೇಕು. ನಿಮಗೆ ಬೇಕಾದ ವಿಭಾಗವನ್ನು ಆಯ್ಕೆ ಮಾಡಿಕೊಳ್ಳಬೇಕು. ಹುದ್ದೆಯ ಅಧಿಸೂಚನೆ ಓದಬೇಕು ಆನ್ ಲೈನ್ ಅರ್ಜಿ ನಮೂನೆಯ ಲಿಂಕ್ ಓಪನ್ ಮಾಡಬೇಕು ಯಾವುದೇ ತಪ್ಪಿಲ್ಲದೆ ಎಲ್ಲ ವಿವರಗಳನ್ನು ಭರ್ತಿ ಮಾಡಬೇಕು ದಾಖಲೆಗಳನ್ನು ಅಪ್ ಲೋಡ್ ಮಾಡಿ ಅರ್ಜಿ ಸಲ್ಲಿಸಬೇಕು ಫ್ಯೂಚರ್ ರೆಫರೆನ್ಸ್ ಗಾಗಿ ಅರ್ಜಿಯ ಪ್ರತಿಯನ್ನು ಪ್ರಿಂಟ್ ತೆಗೆದಿಟ್ಟುಕೊಳ್ಳಬೇಕು.


## ಮಸ್ಕಿ ಠಾಣೆಯಲ್ಲಿ ಡಿವೈಎಸ್ಪಿ ದತ್ತಾತ್ರೇಯ ಕಾರ್ನಾಡ್ ಅಧ್ಯಕ್ಷತೆಯಲ್ಲಿ ಹೋಳಿ ಹಾಗೂ ರಂಜಾನ್ ಶಾಂತಿ ಸಭೆ

# ಎಲ್ಲರೂ ಪ್ರತಿಯೊಂದು ಹಬ್ಬಗಳನ್ನು ಸೌಹಾರ್ದ ಹಿತವಾಗಿ ಆಚರಿಸಿ :ಡಿವೈಎಸ್ಪಿ ಕಾರ್ನಾಡ್

ನೈಜ್ಯ ದೆಸೆ ನ್ಯೂಸ್

ಮಸ್ಕಿ: ಹೋಳಿ ಮತ್ತು ರಂಜಾನ್ ಹಬ್ಬಗಳು ಬಂದಿದ್ದು. ಈ ಎರಡು ಹಬ್ಬಗಳನ್ನು ಹಿಂದೂ–ಮುಸ್ಲಿಂ ಬಾಂಧವರು ಸೇರಿಕೊಂಡು ಶಾಂತಿಯುತವಾಗಿ ಸಡಗರ ಸಂಭ್ರಮದಿಂದ ಆಚರಿಸಲು ಎಲ್ಲರೂ ಸಹಕರಿಸಬೇಕೆಂದು ಡಿವೈಎಸ್‌ಪಿ ದತ್ತಾತ್ರೇಯ ಕಾರ್ನಾಡ್ ಹೇಳಿದರು.

ಸ್ಥಳಿಯ ಪೋಲಿಸ್ ಠಾಣೆ ಅಂಗಳದಲ್ಲಿ ಪೋಲಿಸ್ ಇಲಾಖೆ ಸಂಯುಕ್ತ ಆಶ್ರಯದಲ್ಲಿ ಬುಧವಾರ ನಡೆದ ಹೋಳಿ ಮತ್ತು ರಂಜಾನ್ ಹಬ್ಬಗಳ ಶಾಂತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಶಾಂತತೆ ಕಾಪಾಡಿಕೊಂಡು ಹಬ್ಬ ಆಚರಿಸಲು ಎಲ್ಲರೂ ಸಹಕಾರ ನೀಡಬೇಕು. ತಾಲೂಕಾಧ್ಯಂತ ಹಲವು ವರ್ಷಗಳಿಂದ ಹಬ್ಬದ ಸಂದರ್ಭದಲ್ಲಿ ಅಹಿತಕರ ಘಟನೆಗಳು ನಡೆದಿಲ್ಲ.



ಪಟ್ಟಣದಲ್ಲಿ ಫ್ಲೆಕ್ಸ್, ಬ್ಯಾನರ್ ಗಳನ್ನು ಅಳವಡಿಸಬೇಕಾದರೆ ಕಡ್ಡಾಯವಾಗಿ ಪುರಸಭೆಯಿಂದ ಪರವಾನಿಗೆ ಪಡೆದುಕೊಂಡು ಅಳವಡಿಸಿ ನಿಗದಿತ ಅವಧಿಯೊಳಗೆ ತೆರವುಗೊಳಿಸಿ– *ಡಿವೈಎಸ್ಪಿ ದತ್ತಾತ್ರೇಯ ಕಾರ್ನಾಡ್.

ಈ ಬಾರಿ ಹಬ್ಬವನ್ನು ಶಾಂತಿಯುತವಾಗಿ ಆಚರಿಸಲು ಎಲ್ಲ ಸಮಾಜದವರು, ಸಾರ್ವಜನಿಕರು ಮುಂದಾಗಬೇಕು. ಈಗಾಗಲೇ ಅಹಿತಕರ ಘಟನೆ ನಡೆಯದಂತೆ ಮುಂಜಾಗ್ರತೆ ಕ್ರಮ ಕೈಗೊಳ್ಳಲಾಗಿದೆ. ಬೇಕಾಬಿಟ್ಟಿಯಾಗಿ ಬಣ್ಣ ಎರಚಿ ಕುಡಿದ ಅಮಲಿನಲ್ಲಿ ಬೇಕಾಬಿಟ್ಟಿ ಬೈಕ್ ಓಡಿಸಿ ಸಾರ್ವಜನಿಕರಿಗೆ ತೊಂದರೆ ಕೊಡಬೇಡಿ.

ರಸಾಯನಿಕ ಮುಕ್ತ ಬಣ್ಣ ಖರೀದಿಸಿ ಬಣ್ಣದಾಟ ಆಚರಿಸಿ. ಅಂತಹದ್ದೇನು ಅಹಿತಕರ ಘಟನೆ ಕಂಡುಬಂದರೆ ಸೂಕ್ತ ಕಾನುನೂ ಕ್ರಮ ಕೈಗೊಳ್ಳಲಾಗುವುದೆಂದು ಎಚ್ಚರಿಕೆ ನೀಡಿದರು. ಸಿಪಿಐ ರಾಮಣ್ಣ ಜಲಿಗೇರಿ ಮಾತನಾಡಿ ಮಸ್ಕಿ ಪಟ್ಟಣವು ಸೌಹಾರ್ದತೆಗೆ ಹೆಸರುವಾಸಿಯಾಗಿದ್ದು, ಹಿಂದಿನಿಂದಲೂ ಎಲ್ಲ ಸಮಾಜದ ಹಿರಿಯರು ಅಹಿತಕರ ಘಟನೆಗಳಿಗೆ ಅವಕಾಶ ಮಾಡಿಕೊಟ್ಟಿಲ್ಲ. ಅದೇ ರೀತಿಯಾಗಿ ಈ ವರ್ಷವೂ ಹೋಳಿ ಮತ್ತು ರಂಜಾನ್ ಹಬ್ಬವು ಬಹುತೇಕ ಶುಕ್ರವಾರ ನಡೆಯಲಿದ್ದು, ನಾವೆಲ್ಲರೂ ಒಂದೇ ಎಂಬ ಭಾವೈಕ್ಯತೆಯಿಂದ ಶಾಂತಿಯುತವಾಗಿ ಹಬ್ಬ ಆಚರಿಸುವುದರಿಂದ ನಮ್ಮೆಲ್ಲರಿಗೂ ಒಳ್ಳೆಯದು ಎಂದರು.

ಹಿರಿಯ ಮುಖಂಡ ಮಹಾದೇವಪ್ಪಗೌಡ ಪಾಟೀಲ್, ಬಸನಗೌಡ ಪಾಟೀಲ್ ಪುರಸಭೆ ಮಾಜಿ ಅಧ್ಯಕ್ಷರಾದ ಮೌನೇಶ ಮುರಾರಿ, ಮಲ್ಲಯ್ಯ.ಕೆ. ಅಂಬಾಡಿ, ಜಿಲಾನಿ ಖಾಜಿ, ಸರಪ್ಪ ಬಂಗಾಲಿ ಮಾತನಾಡಿದರು. ಪರವಾನಿಗೆ ಕಡ್ಡಾಯ: ಪಟ್ಟಣದಲ್ಲಿ ಬ್ಯಾನರ್ ಫ್ಲೇಕ್ಸ್ ಅಳವಡಿಸಲು ಪುರಸಭೆಯಿಂದ ಕಡ್ಡಾಯ ಪರವಾನಿಗೆ ಪಡೆದುಕೊಳ್ಳಬೇಕು. ಪರವಾನಿಗೆ ಅವಧಿ ಮುಗಿದ ಕೂಡಲೇ ತೆರವುಗೊಳಿಸಬೇಕೆಂದರು. ಈ ಸಂದರ್ಭದಲ್ಲಿ ಪುರಸಭೆ ಮುಖ್ಯಾಧಿಕಾರಿ ನರಸರಡ್ಡಿ, ರವಿಗೌಡ ಪಾಟೀಲ್, ಚೇತನ ಪಾಟೀಲ್, ದೊಡ್ಡಕರಿಯಪ್ಪ, ಮೌನೇಶ ನಾಯಕ, ಮಸೂದಪಾಷ, ಅಶೋಕ ಮುರಾರಿ, ಆರ್.ಕೆ.ನಾಯಕ, ಬಸವರಾಜ ಬುಕ್ಕಣ್ಣ, ಭರತ್‌ಕುಮಾರ, ಡಾ.ಸಂತೋಷ ಪತ್ತಾರ್, ನೂರ್‌ಅಹ್ಮದ್, ನಿಸಾರ ಆಹ್ಮದ್, ಹುಸೇನ ಶೆಡ್ಮಿ, ಕಿರಣ ಮುರಾರಿ ಸೇರಿದಂತೆ ಹಿಂದೂ–ಮುಸ್ಲಿಂ ಸಮಾಜ ಮುಖಂಡರು ಸೇರಿದಂತೆ ಪೊಲೀಸ್ ಇಲಾಖೆ ಸಿಬ್ಬಂದಿಗಳಿದ್ದರು.

## ನೇಮಕಾತಿ ಪ್ರಕಟಣೆ

ಕರ್ನಾಟಕ ಹೈಕೋರ್ಟ್ ನೇಮಕಾತಿ 2026–70 ಸಹಾಯಕ ನ್ಯಾಯಾಲಯ ಕಾರ್ಯದರ್ಶಿ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಕರ್ನಾಟಕ ಹೈಕೋರ್ಟ್ ನೇಮಕಾತಿ 2026: 70 ಸಹಾಯಕ ನ್ಯಾಯಾಲಯ ಕಾರ್ಯದರ್ಶಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕರ್ನಾಟಕ ಹೈಕೋರ್ಟ್ ಮಾರ್ಚ್ 2026 ರ ಕರ್ನಾಟಕ ಹೈಕೋರ್ಟ್ ಅಧಿಕೃತ ಅಧಿಸೂಚನೆಯ ಮೂಲಕ ಸಹಾಯಕ ನ್ಯಾಯಾಲಯ ಕಾರ್ಯದರ್ಶಿ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಬೆಂಗಳೂರು ಕರ್ನಾಟಕದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು ಏಪ್ರಿಲ್ 15, 2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 16–03–2026 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಮತ್ತು ಶುಲ್ಕ ಪಾವತಿಸಲು ಕೊನೆಯ ದಿನಾಂಕ: 15–ಏಪ್ರಿಲ್–2026 ಅಧಿಕೃತ ವೆಬ್‌ಸೈಟ್: karnatakajudiciary.kar.nic.in

## ಯುವ ಶಕ್ತಿಯೇ ರಾಷ್ಟ್ರದ ಬೆನ್ನೆಲುಬು :ಆಂಜನೇಯ ನಸಲಾಪುರ

ನೈಜ್ಯ ದೆಸೆ ನ್ಯೂಸ್

**ಸಿರವಾರ: ಒಂದು ರಾಷ್ಟ್ರ ಅಭಿವೃದ್ಧಿಯಾಗಬೇಕಾದರೆ ಯುವಶಕ್ತಿ ಜಾಗೃತರಾದಾಗ ದೇಶ ಉತ್ತಮ ರಾಷ್ಟ್ರವಾಗುತ್ತದೆ ಎಂದು ಆಂಜನೇಯ ನಸಲಾಪುರ ಹೇಳಿದರು. ಸಿರವಾರ ತಾಲೂಕಿನ ಮಾಡಗಿರಿ ಗ್ರಾಮದಲ್ಲಿ ಸಿದ್ದಾರ್ಥ ಪದವಿ ಮಹಾವಿದ್ಯಾಲಯದ ಸಂಯುಕ್ತಾಶ್ರಯದಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ 6ನೇ ದಿನದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.**



ಈ ಒಂದು ಕಾರ್ಯಕ್ರಮದಲ್ಲಿ ರಾಷ್ಟ್ರ ನಿರ್ಮಾಣದಲ್ಲಿ ಯುವಕರ ಪಾತ್ರ ಎಂಬ ವಿಷಯದ ಕುರಿತು ಆಂಜನೇಯ ನಸಲಾಪುರ ಮಾತನಾಡಿ ರಾಷ್ಟ್ರ ನಿರ್ಮಾಣ ಎನ್ನುವುದು ಜನರನ್ನು ಸಂಘಟಿಸಿ ಅವರಲ್ಲಿ ಸಾಮರಸ್ಯ ಮೂಡಿಸಿ, ಎಲ್ಲಾರು ಒಪ್ಪಿಕೊಳ್ಳುವ ವಿಶಾಲವಾಗಿ ನಿರ್ಮಿಸುವ ಪ್ರಕ್ರಿಯೆಯನ್ನು ರಾಷ್ಟ್ರ ನಿರ್ಮಾಣ ಎನ್ನುವರು. ಸ್ವಾಮಿ ವಿವೇಕಾನಂದರು ಕಬ್ಬಿಣದ ಮಾಂಸ ಖಂಡಗಳುಳ್ಳ, ಉಕ್ಕಿನ ನರ ಮಂಡಳಗಳುಳ್ಳ ಯಾರು ನನ್ನ ದೇಶ ದೇಶ ಎನ್ನುವ ಪರಿಕಲ್ಪನೆಯುಳ್ಳ ಯುವಕರು ಬೇಕು ಎಂದು ಹೇಳಿದ್ದಾರೆ. ದೇಶ ನನಗೆ ಏನು ಕೊಟ್ಟಿದೆ ಎನ್ನುವುದಕ್ಕಿಂತ ದೇಶಕ್ಕಾಗಿ ನಾನು ಏನು ಮಾಡಿದೆ ಎನ್ನುವುದು ಬಹಳ ಮುಖ್ಯವಾಗಿರುತ್ತದೆ. ಸ್ವಾಮಿ ವಿವೇಕಾನಂದರ ಆದರ್ಶ ಮೌಲ್ಯಗಳು ಇಂದಿನ ಯುವಕ–ರಿಗೆ ಸ್ಫೂರ್ತಿದಾಯಕವಾಗಲಿ ಎಂದು ಹೇಳಿದರು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಸುಜಾತಾ ಮಾತನಾಡಿ ಇಂದಿನ ಯುವಕರು ಯಾವುದೇ ದುಃಶ್ಚಗಳಿಗೆ ಬಲಿಯಾಗದೆ ನಿಮ್ಮ ಜೀವನವನ್ನು ಉತ್ತಮವಾಗಿ ರೂಪಿಸಿಕೊಲ್ಲಬೇಕೆಂದು ಹೇಳಿದರು. ಈ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಸೇವಾ ಯೋಜನಾಧಿಕಾರಿಗಳಾದ ಮಾರಯ್ಯ ಆರೋಲಿ, ಶಾಂತ ಮೂರ್ತಿ ಪ್ರಾಚಾರ್ಯರು, ಉಪನ್ಯಾಸಕರಾದ ರವಿ ಸುಂಕನೂರು, ಹನುಮಂತ ಬೈಲ್ ಮರ್ಚೆಡ, ಹನುಮಂತ ಚಿಕ್ಕೋಟ್ನೆಕಲ್, ದೇವೇಂದ್ರಪ್ಪ, ಬಾಗಯ್ಯ ನಾಯಕ ಕರಡಿಗುಡ್ಡ ಹಾಗೂ ಶಿಬಿರಾರ್ಥಿಗಳು, ಊರಿನ ಮುಖಂಡರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಐಶ್ವರ್ಯ ನಿರೂಪಿಸಿದರು ಸೃಷ್ಟಿ ಸ್ವಾಗತಿಸಿದರು., ಗೀತಾ ವಂದಿಸಿದರು.

## ಬೆನಕಟ್ಟಿಯಲ್ಲಿ ಬಿದ್ದ ರಾಶಿಗಟ್ಟಲೇ ಆಲಿಕಲ್ಲು

ನೈಜ್ಯ ದೆಸೆ ನ್ಯೂಸ್

**ಬಾಗಲಕೋಟೆ: ತಾಲೂಕಿನ ಬೆನಕಟ್ಟಿ, ಮನ್ನಿಕಟ್ಟಿ, ಹಳ್ಳೂರ, ಭಗವತಿ ಸೇರಿದಂತೆ ವಿವಿಧೆಡೆ ಮಂಗಳವಾರ ಸಂಜೆ ಆಲಿಕಲ್ಲು ಸಮೇತ ಪೂರ್ವ ಮುಂಗಾರು ಮಳೆ ಅಬ್ಬರಿಸಿದೆ. ಸಾಮಾನ್ಯವಾಗಿ ಯುಗಾದಿ ಬಳಿಕ ಶುರುವಾಗುತ್ತಿದ್ದ ಪೂರ್ವ ಮುಂಗಾರು ಮಳೆ ಈ ಸಲ ಯುಗಾದಿ ಹಬ್ಬಕ್ಕೂ ಮುನ್ನವೇ ಆಗಮಿಸಿದ್ದು ರೈತರನ್ನು ಕಂಗಾಲು ಆಗುವಂತೆ ಮಾಡಿದೆ.ಸದ್ಯ ರೈತರು ಹಿಂಗಾ–ರಿನ ಬಿಳಿಜೋಳ, ಕಡಲೆ, ಗೋಽ ರಾಶಿ ಮಾಡುತ್ತಿದ್ದಾರೆ.**



ಸಾಕಷ್ಟು ರೈತರು ಕಟಾವು ಮಾಡಿದ್ದು, ಹಲವರು ಇನ್ನು ಕಟಾವು ಹಂತದಲ್ಲಿ ಇದ್ದಾರೆ. ಇದೀಗ ತಾಲೂಕಿನ ವಿವಿಧೆಡೆ ಮಂಗಳವಾರ ಸಂಜೆ ಸು–ರಿದ ಮಳೆಯ ಜೊತೆಗೆ ಭಾರಿ ಪ್ರಮಾಣದಲ್ಲಿ ಆಲಿಕಲ್ಲುಗಳು ಬಿದ್ದಿದ್ದು, ರಾಶಿ ಮಾಡುವ ಬೆಳೆಗಳು ಹಾನಿಯಾಗಲಿವೆ ಎಂದು ರೈತರು ಕಂಗಾಲಾಗಿದ್ದಾರೆ.ಪ್ರಸಕ್ತ ವರ್ಷ ಬಿಳಿಜೋಳದ ಗಣಕಿಗೆ ಹೆಚ್ಚಿನ ಬೇಡಿಕೆ ಇದ್ದು, ರೊಟ್ಟಿಗೆ ಜೋಳ ಮತ್ತು ದನಕರುಗಳಿಗೆ ಮೇವು ಆಗುತ್ತಿದೆ ಎನ್ನುವ ವಿಶ್ವಾಸದಲ್ಲಿ ಇದ್ದ ರೈತರಿಗೆ ಇದೀಗ ಆಲಿಕಲ್ಲು ಹೊಡೆತ ನೀಡಿದೆ. ಮಂಗಳವಾರ ಸಂಜೆ ಬಾಗಲಕೋಟೆ ನಗರ ಸೇರಿದಂತೆ ವಿವಿಧೆಡೆ ಭಾರಿ ಪ್ರಮಾಣದಲ್ಲಿ ಗಾಳಿ ಬೀಸಿದ್ದು, ವಾಹನ ಸವಾರರು ಪರದಾಡುವ ಸ್ಥಿತಿ ಕಂಡು ಬಂದಿತು. ಬಾಗಲಕೋಟೆ ಉಪ ಚುನಾವಣೆ ಹಿನ್ನೆಲೆಯಲ್ಲಿ ತಾಲೂಕಿನ ಹೊಸೂರ ಗ್ರಾಮದಲ್ಲಿ ತಾತ್ಕಾಲಿಕವಾಗಿ ಹಾಕಿದ್ದ ಚೆಕ್ ಪೋಸ್ಟ್ ಭಾರಿ ಗಾಳಿಗೆ ಹಾರಿ ಹೋಗಿದೆ. ಇದರಿಂದ ಸಿಬ್ಬಂದಿ ಪರದಾಡುವಂತಾಯಿತು. ಬೆನಕಟ್ಟಿ, ಹಳ್ಳೂರ, ಭಗವತಿ, ಮನ್ನಿಕಟ್ಟಿ ಭಾಗದಲ್ಲಿ ಮಳೆ ಹಾಗೂ ಆಲಿಕಲ್ಲು ಸುರಿದಿರುವ ವರದಿಯಾಗಿದೆ. ಬೆನಕಟ್ಟಿ ಗ್ರಾಮದಲ್ಲಂತೂ ರಸ್ತೆ ತುಂಬ ಆಲಿಕಲ್ಲು ರಾಶಿಯೇ ಕಂಡು ಬಂದಿತು.====== ಕೋಟ್...ಸದ್ಯ ಹಿಂಗಾರು ಹಂಗಾಮಿನ ಕಡಲೆ, ಜೋಳ, ಗೋಽ ರಾಶಿ ಭರಪೂರ ನಡೆದಿದೆ. ಮಂಗಳವಾರ ಸಂಜೆ ಬೀಸಿದ ಭಾರಿ ಗಾಳಿ, ಮಳೆ ಮತ್ತು ಅಪಾರ ಪ್ರಮಾಣದ ಆಲಿಕಲ್ಲು ಬಿದ್ದು ಬೆಳೆಗಳು ಸಂಪೂರ್ಣ ಹಾಳಾಗಿವೆ. ಜಾನುವಾರುಗಳಿಗೆ ವರ್ಷಗಟ್ಟಲೇ ಮೇಯಿಸುವ ಹೊಟ್ಟು ಮತ್ತು ಜೋಳದ ಕಣಿಕೆ ಅಪಾರ ಪ್ರಮಾಣದಲ್ಲಿ ಹಾನಿಯಾಗಿದೆ. ಈ ಬಗ್ಗೆ ಸರ್ಕಾರ ಕೂಡಲೇ ಗಮನ ಹ–ರಿಸಬೇಕು. ಬೆಳೆ ಹಾಗೂ ಮೇವು ಹಾನಿಯ ಬಗ್ಗೆ ತಕ್ಷಣವೇ ಸರ್ವೆ ಮಾಡಿಸಿ, ನಷ್ಟ ಅನುಭವಿಸಿರುವ ರೈತರಿಗೆ ಪರಿಹಾರ ಕೊಡಬೇಕು. ಹಾಗೂ ಜಾನುವಾರುಗಳಿಗೆ ಮೇವಿನ ಪೂರೈಕೆ ಮಾಡಬೇಕು.–ರಂಗಣ್ಣ ಬೆಣ್ಣೂರರೈತರು, ಬೆನಕಟ್ಟಿ ಗ್ರಾಮ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

## ಮಹಿಳೆಯರು ಸಂಸ್ಕಾರ, ಸಂಸ್ಕೃತಿ ಉಳಿಸುವ ಬೆಳೆಸುವ ಕೆಲಸ ಮಾಡಬೇಕು: ಡಾ. ತೇಜಸ್ವಿನಿ ಎಮ್




ನೈಜ್ಯ ದೆಸೆ ನ್ಯೂಸ್

**ಮಸ್ಕಿ ಪಟ್ಟಣದಲ್ಲಿರುವ ಸನ್ ರೈಸ್ ಮಹಿಳಾ ಪದವಿ ಮಹಾವಿದ್ಯಾಲಯದಲ್ಲಿ ಬಿಎ & ಬಿ ಕಾಮ್ ಪ್ರಥಮ ವರ್ಷದ ವಿದ್ಯಾರ್ಥಿನಿಯರಿಗೆ ಸ್ವಾಗತ ಸಮಾರಂಭ ಮತ್ತು ಪದವಿ ಪ್ರಮಾಣ ಪತ್ರ ವಿತರಣೆ ಹಾಗೂ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ನಡೆಯಿತು.**

ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷರಾದ ರುದ್ರಯ್ಯ ಸ್ವಾಮಿ ಬಳಗಾನೂರ ವಹಿಸಿಕೊಂಡಿದ್ದರು. ಪ್ರಾಸ್ತಾವಿಕ ನುಡಿಯನ್ನು ಪ್ರಾಚಾರ್ಯರಾದ ಸಿದ್ದಪ್ಪ ಉದ್ಬಾಳ ಮಾತನಾಡಿ ವಿದ್ಯಾರ್ಥಿನಿಯರು ಜೀವನದಲ್ಲಿ ಉತ್ತಮ ಶಿಕ್ಷಣ, ಒಳ್ಳೆಯ ಶಿಸ್ತು ಬೆಳೆಸಿಕೊಳ್ಳಲು ಹೇಳಿದರು. ನಂತರ ವಿಶೇಷ ಉಪನ್ಯಾಸ ನೀಡಿದ ಸ್ತ್ರೀ ರೋಗ ತಜ್ಞೆ ಡಾ.ತೇಜಸ್ವಿನಿ ಎಮ್ ಇತ್ಲಿ ಮಾತನಾಡಿ ವಿದ್ಯಾರ್ಥಿನಿಯರು ತಂದೆ ತಾಯಿಗೆ ಒಳ್ಳೆಯ ಮಕ್ಕಳಾಗಿ ಬದುಕಬೇಕು, ಉತ್ತಮ ಶಿಕ್ಷಣ ಪಡೆದು ಉನ್ನತ ಹುದ್ದೆ ಹೊಂದಿ ಸಮಾಜಕ್ಕೆ ಆದರ್ಶ ಪ್ರಾಯರಾಗಿ ಬದುಕಬೇಕು ಎಂದು ಹೇಳಿದರು. ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಮಹಿಳರಿಗೆ ಸನ್ಮಾನಿಸಲಾಯಿತು.

ಈ ವೇಳೆಯಲ್ಲಿ ಸಂಸ್ಥೆಯ ಕಾರ್ಯದರ್ಶಿ ಸುನಿಲ್ ಕುಮಾರ ಸ್ವಾಮಿ, ನಿರ್ದೇಶಕರಾದ ಸಿದ್ದಲಿಂಗಯ್ಯ ಸೊಪ್ಪಿಮಠ, ಎಮ್ ಅಮರೇಶ್ ಹಾಗೂ ಪ್ರಾಚಾರ್ಯರುಗಳಾದ ನಾಗೇಶ ಜಂಗಮರಹಳ್ಳಿ , ತಿಪ್ಪಣ್ಣ, ಲಕ್ಷ್ಮಣ ಕರ್ಲಿ, ವಿನಯ್ ಕುಮಾರ್ ಹಿರೇಮಠ , ವೀರೇಶ ಹೂಗಾರ, ವೀರೇಶ ಬೆಳಿಗನೂರ , ಸಿದ್ದಪ್ಪ ಗೋನಾಳ ಇದ್ದರು. ನಿರೂಪಣೆ ಶ್ರೀ ಮತಿ ಗುಂಡಮ್ಮ, ಸ್ವಾಗತ ಶ್ರೀ ಶ್ರೀಕಾಂತ ಹಾಲಾಪೂರ, ಕು.ಅಶ್ವಿನಿ ವಂದಿಸಿದರು. ಕಾಲೇಜಿನ ಉಪನ್ಯಾಸಕ, ಉಪನ್ಯಾಸಕಿಯರು ಉಪಸ್ಥಿತರಿದ್ದರು. ನಂತರ ವಿದ್ಯಾರ್ಥಿನಿಯ–ರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

## ವಾಣಿಜ್ಯ ಬಳಕೆ ಎಲ್‌ಪಿಜಿ ಪೂರೈಕೆ ಸ್ಥಗಿತ; ಕೇಂದ್ರ, ರಾಜ್ಯ ಸರಕಾರಗಳಿಗೆ ಹೈಕೋರ್ಟ್ ನೋಟಿಸ್

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ನಗರದ ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳಿಗೆ ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್ ಸರಬರಾಜು ನಿಲ್ಲಿಸಿರುವ ಕ್ರಮ ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿ ಸಂಬಂಧ ಕೇಂದ್ರ ಮತ್ತು ರಾಜ್ಯ ಸರಕಾರಗಳಿಗೆ ಹೈಕೋರ್ಟ್ ನೋಟಿಸ್ ಜಾರಿಗೊಳಿಸಿದೆ.**



ಇದೇ ವೇಳೆ, ರಾಜ್ಯವಾರು ಎಲ್‌ಪಿಜಿ ಸಿಲಿಂಡರ್‌ಗಳ ಹಂಚಿಕೆ ಪ್ರಕ್ರಿಯೆ, ಮಾರ್ಚ್ ತಿಂಗಳಲ್ಲಿ ಹಂಚಿಕೆಯಲ್ಲಿ ಕರ್ನಾಟಕದ ಪಾಲು ಎಷ್ಟು? ಮತ್ತು ರಾಜ್ಯದಲ್ಲಿ ಪ್ರಸ್ತುತ ಸಿಲಿಂಡರ್ ದಾಸ್ತಾನು ಎಷ್ಟಿದೆ? ಎಂಬ ಬಗ್ಗೆ ವಿವರವಾದ ಮಾಹಿತಿ ನೀಡುವಂತೆ ನ್ಯಾಯಾಲಯ ನಿರ್ದೇಶಿಸಿದೆ. ಬೆಂಗಳೂರು ಹೋಟೆಲ್‌ಗಳ ಸಂಘ ಮತ್ತದರ ಪದಾಧಿಕಾರಿಗಳು ಸಲ್ಲಿಸಿರುವ ರಿಟ್ ಅರ್ಜಿಯನ್ನು ಮಂಗಳವಾರ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಚಿನ್ ಶಂಕರ್ ಮಗದಂ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ನಿರ್ದೇಶನ ನೀಡಿ ವಿಚಾರಣೆಯನ್ನು ಮಾರ್ಚ್ 23ಕ್ಕೆ ಮುಂದೂಡಿತಲ್ಲದೆ, ಅರ್ಜಿಯಲ್ಲಿ ಹೋಟೆಲ್ ಉದ್ಯಮದವರು ಎತ್ತಿರುವ ಎಲ್ಲ ವಿಚಾರಗಳ ಬಗ್ಗೆ ವಿಚಾರಣೆ ನಡೆಸುವುದಾಗಿ ನ್ಯಾಯಪೀಠ ತಿಳಿಸಿದೆ.

ಇದಕ್ಕೂ ಮುನ್ನ ಅರ್ಜಿದಾರ ವಕೀಲ ಕೆ. ಸತೀಶ್ ಭಟ್ ವಾದ ಮಂಡಿಸಿ, ಬೆಂಗಳೂರು ನಗರದಲ್ಲಿ 40 ಸಾವಿರಕ್ಕೂ ಅಧಿಕ ಹೋಟೆಲ್–ರೆಸ್ಟೋರೆಂಟ್‌ಗಳಿದ್ದು, ಅಲ್ಲಿ ಸುಮಾರು 6 ಲಕ್ಷ ಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದಾರೆ. ಆದ–’ರೆ, ಏಕಾಏಕಿ ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್‌ಗಳ ಸರಬರಾಜನ್ನು ನಿಲ್ಲಿಸಲಾಗಿದೆ. ಇದ–ರಿಂದ, ಹೋಟೆಲ್‌ಗಳು ಮುಚ್ಚುಲ್ಪಡುತ್ತಿವೆ, ಅವುಗಳ ಕಾರ್ಮಿಕರು ಸಂಕಷ್ಟ ಎದುರಿಸುತ್ತಿದ್ದಾರೆ. ಇಡೀ ರಾಜ್ಯಕ್ಕೆ ನಿತ್ಯ 1 ಸಾವಿರ ಸಿಲಿಂಡರ್ ಸರಬರಾಜು ಮಾಡಲಾಗುವುದು ಎಂದು ಹೇಳಲಾಗುತ್ತಿದೆ. ಹೀಗಾದಾರೆ ಸಿಲಿಂಡರ್ ಸರಬರಾಜು ಬಿಕ್ಕಟ್ಟು ಪರಿಹಾರ ಹೇಗೆ ಮಾಡಲಾಗುತ್ತದೆ ಎಂಬುದೇ ತಿಳಿಯುತ್ತಿಲ್ಲ ಎಂದು ಆತಂಕ ವ್ಯಕ್ತಪಡಿಸಿದರು. ಕೇಂದ್ರ ಸರಕಾರದ ಪರ ವಕೀಲರು, ಈ ಅರ್ಜಿಯಲ್ಲಿ ಎತ್ತಲಾಗಿರುವ ವಿಚಾರದ ಬಗ್ಗೆ ಮುಂಬೈ ಹೈಕೋರ್ಟ್ ನಿನ್ನೆಯಷ್ಟೇ ವಿಚಾರಣೆ ಮಾಡಿದೆ ಎಂದು ತಿಳಿಸಿ ಆ ಕುರಿತ ದಾಖಲೆಗಳನ್ನು ನ್ಯಾಯಪೀಠಕ್ಕೆ ಸಲ್ಲಿಸಿದರು.

ಮುಂದುವರಿದು, ಸಿಲಿಂಡರ್ ಪೂರೈಕೆಯು ಸರಕಾರದ ನೀತಿ–ನಿಯಮದ ವಿಚಾರವಾಗಿದೆ. ಪ್ರಕರಣದ ಕುರಿತು ಕೇಂದ್ರ ಸರಕಾರದಿಂದ ಅಗತ್ಯ ಮಾಹಿತಿ–ಸೂಚನೆಗಳನ್ನು ಪಡೆದು ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು. ಸೋಮವಾರವಷ್ಟೇ ಅಗತ್ಯ ಮಾಹಿತಿ ನಮಗೆ ಲಭ್ಯವಾಗಲಿದೆ. ಆದ್ದರಿಂದ, ಅರ್ಜಿ ವಿಚಾರಣೆಯನ್ನು ಮುಂದಿನ ಸೋಮವಾರಕ್ಕೆ ಮುಂದೂಡಬೇಕು ಎಂದು ಕೋರಿದರು. ರಾಜ್ಯ ಸರಕಾರದ ಪರ ವಕೀಲರು ಸಹ ಅರ್ಜಿಗೆ ವಿವರಣೆ ನೀಡಲಾಗುವುದು ಎಂದು ತಿಳಿಸಿದರು. ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ, ಕೇಂದ್ರ ಹಾಗೂ ರಾಜ್ಯ ಸರಕಾರಗಳಿಗೆ ನೋಟಿಸ್ ಜಾರಿಗೊಳಿಸಿತಲ್ಲದೆ, ಎಲ್‌ಪಿಜಿ ಹಂಚಿಕೆ ಕುರಿತ ವಿವರವಾದ ಮಾಹಿತಿ ಒದಗಿಸುವಂತೆ ಸೂಚಿಸಿ ವಿಚಾರಣೆ ಮುಂದೂಡಿತು.

## ವಿವಿ ಮಟ್ಟದ ಅಂತರ ಪದವಿ ಕಾಲೇಜುಗಳ ಖೋಖೋ ಪಂದ್ಯಾವಳಿ ಉದ್ಘಾಟನೆ



ನೈಜ್ಯ ದೆಸೆ ನ್ಯೂಸ್

**ಆರೋಗ್ಯವಂತ ವಿದ್ಯಾರ್ಥಿಯಿಂದ ಶೈಕ್ಷಣಿಕ ಸಾಧನೆ ಸಾಧ್ಯವಿದ್ದು, ಶಿಕ್ಷಣದೊಂದಿಗೆ ಕ್ರೀಡೆಯತ್ತಲ್ಲೂ ಗಮನಹರಿಸಬೇಕಿದೆ ಎಂದು ಕೊಪ್ಪಳ ವಿವಿ ಕುಲಸಚಿವ ಕೆ.ರಮೇಶ ಹೇಳಿದರು.ನಗರದ ಎಸ್‌ಕೆಎನ್‌ಜಿ ಸರ್ಕಾರಿ ಪದವಿ ಕಾಲೇಜಿನಲ್ಲಿ ಕೊಪ್ಪಳ ವಿವಿ ಮತ್ತು ಐಕ್ಯೂಎಸಿ ಸಹಯೋಗದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ವಿವಿ ಮಟ್ಟದ ಅಂತರ ಪದವಿ ಕಾಲೇಜುಗಳ ಖೋಖೋ ಪಂದ್ಯಾವಳಿ ಉದ್ಘಾಟಿಸಿ ಮಾತನಾಡಿದರು.**

ಸದಢ ದೇಹದಲ್ಲಿ ಸದಢ ಆರೋಗ್ಯ ಸಾಧ್ಯವಿದ್ದು, ಆಟೋಟಗಳ ಮೂಲಕ ಬಲಿಷ್ಠರಾಗಬೇಕಿದೆ. ಸದೃಢ ಆರೋಗ್ಯಕ್ಕೆ ಕಾರಣವಾದ ಕ್ರೀಡೆಯೊಂದಿಗೆ ಶಿಕ್ಷಣ, ಸಂಶೋಧನೆಗೂ ವಿವಿ ಆದ್ಯತೆ ನೀಡುತ್ತಿದ್ದು, ಕ್ರೀಡೆಗಳಲ್ಲೂ ತಂತ್ರಜ್ಞಾನ ಅಳವಡಿಸಿಕೊಳ್ಳಬೇಕಿದೆ ಎಂದರು. ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ವೀರೇಶ ಬಲ್ಕುಂದಿ ಮಾತನಾಡಿ, ಕ್ರಿಕೆಟ್ ಹಾವಳಿಯಲ್ಲಿ ದೇಸಿ ಕ್ರೀಡೆಗಳು ಮರೆಯಾಗುತ್ತಿದ್ದು, ಖೋಖೋಗೆ ಅಂತಾರಾಷ್ಟ್ರೀಯ ಮಟ್ಟದಲ್ಲೂ ಮಾನ್ಯತೆಯಿದೆ ಎಂದರು.

ಅಧ್ಯಕ್ಷತೆವಹಿಸಿದ್ದ ಪ್ರಾಚಾರ್ಯ ಡಾ.ಶಿವರಾಜ ಗುರಿಕಾರ್ ಮಾತನಾಡಿದರು. 2 ದಿನಗಳ ಪಂದ್ಯಾವಳಿಯಲ್ಲಿ 25ಕ್ಕೂ ಹೆಚ್ಚು ಕಾಲೇಜುಗಳ ಕ್ರೀಡಾಪಟುಗಳು ಭಾಗವಹಿಸಿದ್ದರು. ವಿವಿ ಆಡಳಿತಾಧಿಕಾರಿ ತಿಮ್ಮಾರೆಡ್ಡಿ, ನಗರಸಭೆ ಮಾಜಿ ಸದಸ್ಯ ಮನೋಹರಗೌಡ ಹೇರೂರು, ಸಿಡಿಸಿ ಸದಸ್ಯರಾದ ಸೋಮಶೇಖರ್ ಕಂಪ್ಲಿ, ರವಿ ಯಲಬುರ್ತಿ, ದೀಪಕ್ ಬಾಂಠಿಯಾ, ಮಂಜುನಾಥ, ಕ್ರೀಡಾ ವಿಭಾಗದ ನಿರ್ದೇಶಕರಾದ ಕೆ.ಶೋಭಾ, ಅನಿಲಕುಮಾರ ಎಡ್ವರ್ಡ್, ಪ್ರಾಧ್ಯಾಪಕರಾದ ಅಣ್ಣೋಜಿರೆಡ್ಡಿ, ದೊರೆಬಾಬು, ಅಶೋಕ, ಡಾ.ಬಸವರಾಜ ಗಡಾದ್ ಇತರರಿದ್ದರು.

## ನಮ್ಮ ಕಾರುಣ್ಯಾಶ್ರಮವು ಗದುಗಿನ ಎರಡನೆಯ ವೀರೇಶ್ವರ ಪುಣ್ಯಾಶ್ರಮವಾಗಿದೆ– ಷ.ಬ್ರ. ಸೋಮನಾಥ ಶಿವಾಚಾರ್ಯ ಮಹಾಸ್ವಾಮಿಗಳು

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆ ಯಾದ ಶ್ರೀಮಠ ಸೇವಾ ಟ್ರಸ್ಟ್ (ರಿ) ಹರೇಟನೂರು ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ ಸ್ವಾಮಿ ಚಾರಿಟೇಬಲ್ ಟ್ರಸ್ಟ್ (ರಿ) ಕರಡಕಲ್. ಅಕ್ಷಯ ಆಹಾರ ಜೋಳಿಗೆ ಸೇವಾ ಟ್ರಸ್ಟ್ (ರಿ) ಸಿಂಧನೂರು ಕೋಡಿಹಳ್ಳಿ ಕಲಾ ಸೇವಾ ಸಂಸ್ಥೆ (ರಿ) ತಿಳವಳ್ಳಿ ತಾ. ಹಾನಗಲ್ ಜಿ. ಹಾವೇರಿ ಇವರುಗಳ ವತಿಯಿಂದ ಕಾರುಣ್ಯ ಯುಗಾದಿ ಸಂಭ್ರಮದಲ್ಲಿ ಶ್ರೀಮದ್ ಜಗದ್ಗುರು ರಂಭಾಪುರಿ ಖಾಸಾ ಶಾಖಾಮಠ ಹಾಗೂ ಕನ್ನೂರಿನ ಮಠದ ಪೀಠಾಧಿಪತಿಗಳಾದ ಷ.ಬ್ರ.ಸೋಮನಾಥ ಶಿವಾಚಾರ್ಯ ಮಹಾಸ್ವಾಮಿಗಳ ದಿವ್ಯ ಸಾನಿಧ್ಯದ ಆಶೀರ್ವಾದದೊಂದಿಗೆ ಸುಮಾರು 11 ಜನ ವಿಶೇಷ ಸಾಧಕರಿಗೆ "ಕರುನಾಡ ಸಿಂಧೂರ ಸೇವಾ ರತ್ನ" ಎನ್ನುವ ಶ್ರೇಷ್ಠ ರಾಜ್ಯ ಪ್ರಶಸ್ತಿಯನ್ನು ವಿತರಿಸಿ ಗೌರವಿಸಿ ಆಶೀರ್ವದಿಸಲಾಯಿತು.**



ಈ ಕಾರ್ಯಕ್ರಮದ ಕಾರುಣ್ಯ ಯುಗಾದಿ ಸಂಭ್ರಮದಲ್ಲಿ ವಿಶೇಷ ಸಾಧಕರುಗಳಾಗಿ ಸಿಂಧನೂ–ರಿನ ಶ್ರೀ ಸಿದ್ದಲಿಂಗೇಶ್ವರ ಇಂಡೇನ್ ಗ್ಯಾಸ್ ನ ಮಾಲೀಕರಾದ ವೀರೇಶ ಗೌಡ ನೆಡೆಕಲ್. ಸರ್ಕಾರಿ ಪ್ರೌಢಶಾಲೆ ಗುಂಜಳ್ಳಿಯ ಶಿಕ್ಷಕರಾದ ಬಸವರಾಜ ಬೆಲ್ಲದ. ಅಲಬನೂರು ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರಾದ ರವಿಕುಮಾರ. ಮಾನ್ವಿ ತಾಲೂಕಿನ ಸರಕಾರಿ ಪ್ರೌಢಶಾಲೆಯ ಶಿಕ್ಷಕರಾದ ಜ್ಯೋತಿ ದೋತ್ರೆ ಸಫಾರ್. ಹಾಗೂ ಸಿಂಧನೂರಿನ ಸೇವಾ ಸಿರಿ ಚರಿಟಬಲ್ ಟ್ರಸ್ಟ್ ನ ಸಂಸ್ಥಾಪಕರಾದ ಪ್ರದೀಪ್ ಪೂಜಾರಿ. ಇನ್ನುಳಿದಂತಹ ಸಾಧಕರುಗಳು "ಕರುನಾಡ ಸಿಂಧೂರ ಸೇವಾ ರತ್ನ " ಪ್ರಶಸ್ತಿಯನ್ನು ಸ್ವೀಕರಿಸಿ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು.

ಇದೇ ಕಾರ್ಯಕ್ರಮದಲ್ಲಿ ಗದುಗಿನ ಲಿಂಗೈಕ್ಯ ಡಾ. ಪಂಡಿತ ಪುಟ್ಟರಾಜ ಗವಾಯಿಗಳ ಶಿಷ್ಯಂದಿರಾದ ಚಿದಾನಂದಪ್ಪ ಸಂಗೀತ ಮಾಸ್ತರ ಗೊರೆಬಾಳ ಇವರನ್ನು ಆಶ್ರಮದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಈ ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯ ವಹಿಸಿದ್ದ ಷ. ಬ್ರ. ಸೋಮನಾಥ ಶಿವಾಚಾರ್ಯ ಮಹಾಸ್ವಾಮಿಗಳು ಯುಗಾದಿಯ ಸಂಭ್ರಮಾಚರಣೆಯನ್ನು ಬಹಳ ವಿಶೇಷವಾಗಿ ಕಾರುಣ್ಯ ಸಂಸ್ಥೆ ಹಮ್ಮಿಕೊಂಡಿರುವುದು ಮತ್ತು ವಿಶೇಷ ಸಾಧಕರುಗಳನ್ನು ಗುರುತಿಸಿ ಪ್ರಶಸ್ತಿ ಪ್ರಧಾನ ಮಾಡುವ ಮೂಲಕ ಅವರುಗಳಿಗೆ ಇನ್ನು ಹೆಚ್ಚಿನ ಸಾಮಾಜಿಕ ಜವಾಬ್ದಾರಿಯನ್ನು ವಹಿಸಿರೋದು ಅತ್ಯಂತ ಶ್ಲಾಘನೀಯ ಕಾರ್ಯ. ಈ ಕಾರುಣ್ಯ ಕುಟುಂಬವು ಹಲವಾರು ಸಮಾಜ ಸೇವಕರುಗಳಿಗೆ ಸ್ಫೂರ್ತಿಯಾಗಿ ಅರ್ಥಪೂರ್ಣವದಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಸಮಾಜಕ್ಕೆ ಮಾದರಿಯಾಗಿರುವುದು ನಮ್ಮ ನಾಡಿನ ಎಲ್ಲಾ ಮಠಾಧೀಶರ ಪ್ರೀತಿಗೆ ಪಾತ್ರವಾಗಿದೆ.



ಮತ್ತು ಸಮಾಜದಲ್ಲಿನ ಹಿರಿಯರನ್ನು ಗೌರವಿಸಿ ಪ್ರೀತಿಸಿ ಪೂಜಿಸಬೇಕು ಎನ್ನುವ ಹಲವಾರು ಅಭಿಯಾನಗಳು ನಮ್ಮ ಭಾರತೀಯ ಸಂಸ್ಕೃತಿ ಸಂಸ್ಕಾರವನ್ನು ಉಳಿಸುವಂತಹ ಸೇವಾ ಕಾರ್ಯಗಳಾಗಿವೆ. ಈ ಯುಗಾದಿ ಹಬ್ಬದ ಹೊಸ ವರ್ಷವು ಇಂದು ಪ್ರಶಸ್ತಿ ಸ್ವೀಕಾರ ಮಾಡಿರುವ ಸಾಧಕರುಗಳಿಗೆ ಮತ್ತು ನಾಡಿನ ಜನತೆಗೆ ಉತ್ತಮ ಆಯಸ್ಸು ಆಯುರಾರೋಗ್ಯ ಸುಖ ಶಾಂತಿ ನೆಮ್ಮದಿಯನ್ನು ಕರುಣಿಸಲಿ ಎನ್ನುವ ಆಶೀರ್ವಾದ ನಮ್ಮದಾಗಿರುತ್ತದೆ ಎಂದು ಆಶೀರ್ವಚನ ನೀಡಿದರು. ನಂತರ ಸಾನಿಧ್ಯ ವಹಿಸಿದ್ದ ಶ್ರೀ ಶಾಂಭವಿ ಪುಣ್ಯಾಶ್ರಮದ ವೇ.ಮೂ. ವೀರೇಶ ಯಡಿಯೂರು ಮಠ ಮಾತನಾಡಿ ಕಾರುಣ್ಯ ಆಶ್ರಮವು ಅದೆಷ್ಟೋ ಕಷ್ಟಗಳ ಮಧ್ಯೆ ಅನಾಥರಿಗೆ ನೊಂದವರಿಗೆ ಬದುಕು ಕಟ್ಟಿಕೊಟ್ಟು ಅವರ ಬಾಳಿಗೆ ಬೆಳಕಾಗಿದೆ.

ಮತ್ತು ವಿಶೇಷವಾಗಿ ಕಲ್ಯಾಣ ಕರ್ನಾಟಕದ ಜನಮಿಡಿತ ಸೇವಾ ಕೇಂದ್ರವಾಗಿ ಕಾರುಣ್ಯ ಕುಟುಂಬ ಹಲವಾರು ಸಾಧಕರಿಗೆ ಸ್ಫೂರ್ತಿಯಾಗಿರುವುದು ನಮ್ಮ ಸಿಂಧನೂರಿನ ಘನತೆ ಗೌರವವನ್ನು ಬರೀ ನಾಡಿಗಲ್ಲದೆ ದೇಶಕ್ಕೆ ತೋ–ರಿಸಿಕೊಟ್ಟಿದೆ. ಮುಂದಿನ ದಿನಮಾನಗಳಲ್ಲಿ ಇಂತಹ ಕಾರ್ಯಕ್ರಮಗಳನ್ನು ಕಾರುಣ್ಯ ಸಂಸ್ಥೆ ಹಮ್ಮಿಕೊಳ್ಳಲಿ ಎನ್ನುವುದು ನಮ್ಮೆಲ್ಲರ ಅಭಿಪ್ರಾಯವಾಗಿದೆ ಎಂದು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಚಿದಾನಂದಪ್ಪ ಸಂಗೀತ ಮಾಸ್ತರ ಗೊರೆಬಾಳ. ಸಾಧಕರುಗಳಾದ ವೀರೇಶ ಗೌಡ ನೆಟೆಕಲ್. ಬಸವರಾಜ ಬೆಲ್ಲದ ಶಿಕ್ಷಕರು. ರವಿಕುಮಾರ ಉಪನ್ಯಾಸಕರು. ಜ್ಯೋತಿ ದೋತ್ರೆ ಸಫಾರ ಶಿಕ್ಷಕರು. ಪ್ರದೀಪ್ ಪೂಜಾರಿ ಸಮಾಜ ಸೇವಕರು. ಶಶಿಧರ ಸ್ವಾಮಿ. ದೊಡ್ಡಬಸವ. ಹಾಗೂ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ.ಚನ್ನಬಸವ ಸ್ವಾಮಿ ಹಿರೇಮಠ. ಶ್ರೀಮಠ ಸೇವಾ ಟ್ರಸ್ಟ್ ನ ಸದಸ್ಯರಾದ ಸುಜಾತ ಹಿರೇಮಠ. ಆಶ್ರಮದ ಸಿಬ್ಬಂದಿಗಳಾದ ಸುಜಾತ ಮಲದ ಗುಡ್ಡ. ಸಿದ್ದಯ್ಯ ಸ್ವಾಮಿ.ಮ–ರಿಯಪ್ಪ. ಮೀನಾಕ್ಷಮ್ಮ.ಲಕ್ಷ್ಮಿ. ಹಾಗೂ ಹಲವಾರು ಸಾಧಕರು ಮತ್ತು ಗಣ್ಯಾತಿ ಗಣ್ಯರು ಉಪಸ್ಥಿತರಿದ್ದರು

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಮೆಕಾಟ್ರಾನಿಕ್ಸ್ ಇಂಜಿನಿಯರಿಂಗ್

ಮೆಕಾಟ್ರಾನಿಕ್ಸ್ ಇಂಜಿನಿಯರಿಂಗ್ (Mechatronics Engineering) ಎನ್ನುವುದು ಯಾಂತ್ರಿಕ (Mechanical), ಎಲೆಕ್ಟ್ರಾನಿಕ್ಸ್, ಕಂಪ್ಯೂಟರ್ ಸೈನ್ಸ್ ಮತ್ತು ರೊಬೊಟಿಕ್ಸ್ ತಂತ್ರಜ್ಞಾನಗಳನ್ನು ಸಂಯೋಜಿಸುವ 4 ವರ್ಷಗಳ ಬಿ.ಇ/ಬಿ.ಟೆಕ್ ಪದವಿ ಕೋರ್ಸ್ ಆಗಿದೆ. ಇದು ಸ್ಮಾರ್ಟ್ ಯಂತ್ರಗಳು, ಆಟೋಮೇಷನ್ ಮತ್ತು ರೋಬೋಟಿಕ್ ಕೈಗಾರಿಕೆಗಳಲ್ಲಿ ಹೆಚ್ಚಿನ ಉದ್ಯೋಗಾವಕಾಶಗಳನ್ನು ಹೊಂದಿದ್ದು,ಮೆಕಾಟ್ರಾನಿಕ್ಸ್ ಎಂಜಿನಿಯರಿಂಗ್ ಕೋರ್ಸ್‌ಗಳು ಇಂದು ಬಹುತೇಕ ಎಲ್ಲವನ್ನೂ ಚಲಾಯಿಸುತ್ತಿರುವ ಅತ್ಯಾಧುನಿಕ ಯಂತ್ರೋಪಕರಣಗಳು, ಉಪಕರಣಗಳು ಮತ್ತು ಬುದ್ಧಿವಂತ ರೊಬೊಟಿಕ್ ವ್ಯವಸ್ಥೆಗಳನ್ನು ನಿರ್ಮಿಸಲು ಸರ್ಕ್ಯೂಟ್‌ಗಳು, ಮೆಕ್ಯಾನಿಕ್ಸ್ ಮತ್ತು ಕಂಪ್ಯೂಟರ್ ಪ್ರೋಗ್ರಾಮಿಂಗ್ ಕೌಶಲ್ಯಗಳ ಜ್ಞಾನವನ್ನು ಹೇಗೆ ಬಳಸುವುದು ಎಂಬುದನ್ನು ಕಲಿಸಲು ವಿನ್ಯಾಸಗೊಳಿಸಲಾಗಿದೆ. ಈ ಕೋರ್ಸ್‌ಗಳು ವಿದ್ಯುತ್ ಮಿದುಳಿನಂತೆ ಕಾರ್ಯನಿರ್ವಹಿಸುವ ಮೈಕ್ರೋಕಂಟ್ರೋಲರ್‌ಗಳನ್ನು ನಿರ್ಣಾಯಕ ಕಾರ್ಯಗಳನ್ನು ನಿರ್ವಹಿಸಲು ವಿವಿಧ ಯಾಂತ್ರಿಕ ಸಾಧನಗಳಿಗೆ ಹೇಗೆ ಸಂಪರ್ಕಿಸುವುದು ಎಂಬುದನ್ನು ನಿಮಗೆ ಕಲಿಸುತ್ತದೆ. ನೀವು ಯುಜಿ, ಪಿಜಿ, ಡಿಪ್ಲೊಮಾ ಮತ್ತು ಪಿಎಚ್‌ಡಿ ಸೇ-ರಿದಂತೆ ವಿವಿಧ ಹಂತಗಳಲ್ಲಿ ಮೆಕಾಟ್ರಾನಿಕ್ಸ್ ಎಂಜಿನಿಯ-ರಿಂಗ್ ಅನ್ನು ಮುಂದುವರಿಸಬಹುದು. ಭಾರತದ ಕೆಲವು ಜನಪ್ರಿಯ ಮೆಕಾಟ್ರಾನಿಕ್ಸ್ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ವಿಐಟಿ ವೆಲ್ಲೂರು, ಎಸ್‌ಆರ್‌ಎಂ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆ, ಚಂಡೀಗಢ ವಿಶ್ವವಿದ್ಯಾಲಯ, ಐಐಟಿ ಹೈದರಾಬಾದ್, ಎಲ್‌ಪಿಯು ಇತ್ಯಾದಿ ಸೇರಿವೆ. ಸಾಮಾನ್ಯವಾಗಿ 50–60% ಕಟಿಂ ಅಂಕಗಳೊಂದಿಗೆ ಪ್ರವೇಶ ಪಡೆಯಬಹುದು. ಮೆಕಾಟ್ರಾನಿಕ್ಸ್ ಇಂಜಿನಿಯರಿಂಗ್ ಕೋರ್ಸ್ ವಿವರಗಳು: ಕೋರ್ಸ್ ಹೆಸರು: ಬಿ.ಇ / ಬಿ.ಟೆಕ್ ಮೆಕಾಟ್ರಾನಿಕ್ಸ್ ಇಂಜಿನಿಯರಿಂಗ್ (B.E/B.Tech Mechatronics Engineering). ಅವಧಿ: 4 ವರ್ಷಗಳು (8 ಸೆಮಿಸ್ಟರ್‌ಗಳು). ಅರ್ಹತೆ (Eligibility): 12ನೇ ತರಗತಿ (PUC) ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಭೌತಶಾಸ್ತ್ರ (Physics), ರಸಾಯನಶಾಸ್ತ್ರ (Chemistry), ಮತ್ತು ಗಣಿತ (Mathematics - PCM) ವಿಷಯಗಳಲ್ಲಿ ಉತ್ತೀರ್ಣರಾಗಿರಬೇಕು. ಕನಿಷ್ಠ 50% – 60% ಅಂಕಗಳು ಅವಶ್ಯಕ. ಪ್ರವೇಶ ಪರೀಕ್ಷೆಗಳು (Entrance Exams): KCET, COMEDK, JEE Main, Shiksha.com ನಲ್ಲಿನ ಉನ್ನತ ಪ್ರವೇಶ ಪರೀಕ್ಷೆಗಳು. ಪಠ್ಯಕ್ರಮದ ಪ್ರಮುಖ ವಿಷಯಗಳು: ರೋಬೋಟಿಕ್ಸ್, ಸೆನ್ಸಾರ್‌ಗಳು (Sensors), ಮೈಕ್ರೋಕಂಟ್ರೋಲರ್‌ಗಳು, ಆಟೋಮೇಷನ್, ಮೆಕ್ಯಾನಿಕಲ್ ಸಿಸ್ಟಮ್ಸ್, ಸಿಎನ್‌ಸಿ (CNC) ಮೆಷಿನ್‌ಗಳು, ಮತ್ತು ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ (AI). ಉದ್ಯೋಗ ಅವಕಾಶಗಳು: ರೋಬೋಟಿ-ಕ್ ಇಂಜಿನಿಯರ್, ಆಟೋಮೇಷನ್ ಇಂಜಿನಿಯರ್, ಪ್ರಾಜೆಕ್ಟ್ ಮ್ಯಾನೇಜರ್, ಆಟೋಮೋಟಿವ್ ಇಂಜಿನಿಯರ್, ಕಂಟ್ರೋಲ್ ಸಿಸ್ಟಮ್ಸ್ ಇಂಜಿನಿಯರ್. ಶುಲ್ಕ: ಕಾಲೇಜಿನ ಆಧಾರದ ಮೇಲೆ ಸರಿಸುಮಾರು 1.42 ಲಕ್ಷದಿಂದ 18 ಲಕ್ಷದವರೆಗೆ ಇರಬಹುದು. ಡಿಪ್ಲೊಮಾ: 3 ವರ್ಷಗಳ ಓಖಿಖಿಈ ಡಿಪ್ಲೊಮಾ ಕೋರ್ಸ್ ಅಥ-ವಾ 3 ವರ್ಷಗಳ ಕರ್ನಾಟಕ ಸರ್ಕಾರದ ಅ–25 ಡಿಪ್ಲೊಮಾ ಲಭ್ಯವಿದೆ. ಮೆಕಾಟ್ರಾನಿಕ್ಸ್ ಇಂಜಿನಿಯರ್‌ಗಳು ಆಟೋಮೊಬೈಲ್, ಏರೋಸ್ಪೇಸ್, ಮತ್ತು ಉತ್ಪಾದನಾ ಉದ್ಯಮಗಳಲ್ಲಿ (Manufacturing Industry) ಹೆಚ್ಚಿನ ಬೇಡಿಕೆಯನ್ನು ಹೊಂದಿದ್ದಾರೆ.

1ನೇ ಪುಟದಿಂದ....

ಗೃಹ ಬಳಕೆ ಸಿಲಿಂಡರ್‌ಗಳನ್ನು ನಿಲ್ಲಿಸುವುದಿಲ್ಲ. 3 ಲಕ್ಷ ಸಿಲಿಂಡರ್ ಬಳಕೆ ಆಗುತ್ತಿದೆ. ಅದನ್ನು ಕೂಡಾ ವಿತರಣೆ ಮಾಡುತ್ತಿದ್ದೇವೆ. ಆದ-ರೆ ಕಮರ್ಷಿಯಲ್ ಗ್ಯಾಸ್ ಸಮಸ್ಯೆ ಆಗಿದೆ. ಶೇ.20 ರಷ್ಟು ಮಾತ್ರ ಕೊಡಲು ಕೇಂದ್ರ ತಿಳಿಸಿದೆ. 9 ಸಾವಿರ ಕಮರ್ಷಿಯಲ್ ಗ್ಯಾಸ್ ವಿತರಣೆ ಮಾಡುತ್ತಿದ್ದೇವೆ.ಎಂದರು. ರೆಸ್ಟೋರೆಂಟ್, ಹೋಟೆಲ್‌ಗೆ 1 ಸಾವಿರ ಗ್ಯಾಸ್ ಮಾತ್ರ ಕೊಡಲು ಅವಕಾಶ ಇದೆ. ಯಾರಿಗೆ ಕೊಡಬೇಕು ಎಂಬುದೇ ನಮಗೆ ಗೊತ್ತಾಗುತ್ತಿಲ್ಲ. ಹೀಗಾಗಿ ಒಂದು ವಾರ ಸಹಿಸಿಕೊಳ್ಳಬೇಕು. ಇದಕ್ಕೆ ಎಲ್ಲರೂ ಸಹಕಾರ ನೀಡಬೇಕು. ಕೇಂದ್ರ ಸರ್ಕಾರ ಇರಾನ್ ಜೊತೆ ಮಾತುಕತೆ ನಡೆಸಿ ಸಮಸ್ಯೆಪರಿಹ-ರಿಸಲು ಪ್ರಯತ್ನಿಸುತ್ತಿದೆ. 16 ಹಡಗುಗಳು ಕ್ಯೂನಲ್ಲಿವೆ. ಅವು ಬಂದರೆ ಸಮಸ್ಯೆ ಸರಿ ಆಗುತ್ತದೆ ಎಂದು ಸಲಹೆ ಮಾಡಿದರು. ಹೋಟೆಲ್ ಅಸೋಸಿಯೇಷನ್ ಅವರ ಜೊತೆ ಮಾತಾಡಿದ್ದೇವೆ. ಒಂದು ವಾರ ಸಹಿಸಿಕೊಂಡರೆ 15 ಸಾವಿರ ಸಿಲಿಂಡರ್ ಸಂಗ್ರಹ ಮಾಡಿ ಅದನ್ನು ಹೇಗೆ ಹಂಚಿಕೆ ಮಾಡಬೇಕು ಎಂದು ಅಸೋಸಿಯೇಷನ್ ಅವರ ಜೊತೆ ಚರ್ಚೆ ನಡೆಸಿ ಹಂಚಿಕೆ ಮಾಡುತ್ತೇವೆ. ಯುದ್ಧ ನಡೆಯುತ್ತಿರುವ ಕಾರಣ ಹೋಟೆಲ್‌ನವರು ಸಹಕಾರ ನೀಡಬೇಕು. ಶಾಸಕರ ಭವನದಲ್ಲಿನ ಗ್ಯಾಸ್ ಸಮಸ್ಯೆ ಗಮನಕ್ಕೆ ಬಂದಿದೆ. ಅಧಿವೇಶನ ಮುಗಿಯುವವರೆಗೂ ಶಾಸಕರ ಭವನಕ್ಕೆ ಕೊಡಬೇಕಾದ ಗ್ಯಾಸ್‌ನಲ್ಲಿ ಶೇ.50ರಷ್ಟು ಗ್ಯಾಸ್ ಪೂರೈಕೆ ಮಾಡುವುದಾಗಿ ಮುನಿಯಪ್ಪ ಹೇಳಿದರು. ಆಸ್ಪತ್ರೆ, ಇಂಡಸ್ಟ್ರಿಗಳಿಗೆ ಏರ್‌ಲೈನ್ಸ್ ಹಾಗೂ ಇಂದಿರಾ ಕ್ಯಾಂಟೀನ್‌ಗೆ 5,200 ಸಿಲಿಂಡರ್ ನೀಡಲಾಗುತ್ತದೆ. ಆಟೋ ರಿಕ್ಷಾಗಳಿಗೆ 2,540 ಸಿಲಿಂಡರ್ ಪೂರೈಕೆ ಮಾಡಲಾಗುತ್ತಿತ್ತು. ಆಟೋಗಳಿಗೆ ಆದ-್ಯತೆ ನೀಡಿರುವುದರಿಂದ ಹೋಟೆಲ್‌ಗಳಿಗೆ ಸಮಸ್ಯೆ ಆಗಿದೆ ಎಂದರು. ಇರಾನ್‌ನಿಂದ ಎರಡು ಹಡಗುಗಳು ಶೀಘ್ರದಲ್ಲೇ ಬರಲಿವೆ. ಇದಲ್ಲದೇ ಇನ್ನೂ 10–12 ಹಡಗುಗಳು ಬರುವ ಸೂಚನೆ ಇದ್ದು, ವಾರದ ಬಳಿಕ ಸಮಸ್ಯೆ ಬಗೆಹರಿಯುವ ನಿರೀಕ್ಷೆಯಿದೆ. ಹೋಟೆಲ್‌ಗಳು ಎಲ್‌ಪಿಜಿ ಬದಲಿಗೆ ವಿದ್ಯುತ್ ಸ್ಟೌವ್ ಬಳಸಿ ಅಗತ್ಯವಿರುವ ತಿಂಡಿ-ತಿನಿಸುಗಳನ್ನು ಮಾತ್ರ ಸಿದ್ಧಪಡಿಸಬೇಕು ಎಂದು ಸಲಹೆ ನೀಡಿದರು. ಆದ್ಯತಾ ಸೇವೆಗಳಿಗೆ ಸಮರ್ಪಕವಾಗಿ ಎಲ್‌ಪಿಜಿ ಸಿಲಿಂಡರ್‌ಗಳು ಲಭ್ಯವಾಗುವಂತೆ ನೋಡಿಕೊಳ್ಳಬೇಕೆಂದು ಎಲ್ಲ ಜಿಲ್ಲಾಧಿಕಾ-ರಿಗಳಿಗೆ ಸೂಚಿಸಲಾಗಿದೆ. ಅಕ್ರಮ ದಾಸ್ತಾನು, ಕಾಳಸಂತೆಯಲ್ಲಿ ಮಾರಾಟ ಮಾಡುವವರ ಮೇಲೆ ನಿಗಾ ವಹಿಸುವಂತೆ ಪೊಲೀಸ್ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದು ವಿವರಿಸಿದರು.

# ಕಾಲದ ಮಗ್ಗದಲ್ಲಿ ಹೊಸ ವಿನ್ಯಾಸದ ನೇತಾರ ಯುಗಾದಿ

**ಕಾಲವು ನಿರಂತರವಾಗಿ ಹರಿಯುವ ನದಿ. ಆ ನದಿಯ ಹರಿವಿನಲ್ಲಿ ಮೂಡುವ ಒಂದು ಸುಂದರ ತಿರುವೇ ಯುಗಾದಿ. ಪ್ರತಿ ವರ್ಷ ಮರಳಿ ಬರುವ ಚೈತ್ರದ ಚಿಗುರು, ಕೇವಲ ಹಬ್ಬವನ್ನಷ್ಟೇ ಅಲ್ಲ; ಬದುಕನ್ನು ಹೊಸದಾಗಿ ಕಟ್ಟಿಕೊಳ್ಳುವ ಆತ್ಮವಿಶ್ವಾಸವನ್ನೂ ನೀಡುತ್ತದೆ.**

**ಸೃಷ್ಟಿಯ ಸಂಕಲ್ಪ ಮತ್ತು ಶಾಸ್ತ್ರದ ನಾದ**

**ನಮ್ಮ ಪುರಾಣಗಳ ಪ್ರಕಾರ, ಬ್ರಹ್ಮದೇವನು ಸೃಷ್ಟಿಯ ಆರಂಭಕ್ಕೆ ಮುಹೂರ್ತ ಇಟ್ಟ ದಿನವೇ ಯುಗಾದಿ.**

"ಚೈತ್ರ ಶುಕ್ಲ ಪ್ರತಿಪದ್ಯಾಂ ದೇವೋ ಜಗತ್ ಸಸರ್ಜ ಹ"

ಅಂದರೆ, ಚೈತ್ರ ಮಾಸದ ಮೊದಲ ದಿನವೇ ಸೃಷ್ಟಿಯ ಉದಯ. ಜ್ಯೋತಿಷ್ಯ ಶಾಸ್ತ್ರದ ದೃಷ್ಟಿಯಲ್ಲಿ, ಈ ದಿನದಿಂದಲೇ ಗ್ರಹಗತಿಗಳ ಹೊಸ ಚಕ್ರ ಆರಂಭವಾಗುತ್ತದೆ. ಸೂರ್ಯನ ಚಲನೆ ಹೊಸ ಚೈತನ್ಯವನ್ನು ಭೂಮಿಗೆ ನೀಡುತ್ತದೆ.

ಬೇವು–ಬೆಲ್ಲ: ಬದುಕಿನ ದಾರ್ಶನಿಕತೆ

ಯುಗಾದಿಯ ವಿಶೇಷತೆಯೇ "ಬೇವು–ಬೆಲ್ಲ".

ಬೇವಿನ ಕಹಿ ಜೀವನದ ಸವಾಲುಗಳು,

ನೋವು, ವಿಫಲತೆ

ಬೆಲ್ಲದ ಸಿಹಿ ? ಯಶಸ್ಸು, ಪ್ರೀತಿ, ಸಂತೋಷ

ಇವೆರಡನ್ನೂ ಮಿಶ್ರಣವಾಗಿ ಸೇವಿಸುವುದು ಎಂದರೆ:

"ಸುಖ–ದುಃಖಗಳನ್ನು ಸಮಚಿತ್ತದಿಂದ ಸ್ವೀಕರಿಸುವ ಸಂಕಲ್ಪ"

ಶ್ಲೋಕ:

ಶತಾಯು ವಜ್ರದೇಹಾಯ

ಸರ್ವಸಂಪತ್ತಕಾರಾಯ ಚ ।

ಸರ್ವಾರಿಷ್ಟ

ವಿನಾಶಾಯ

ನಿಂಬಕಂದಲ

ಭಕ್ಷಣಂ ॥

● ಪಂಚಾಂಗ

ಶ್ರವಣ: ಕಾಲದ

ಕನ್ನಡಿ

ಹಳೆಯ

ಕಾಲದಲ್ಲಿ

ಪಂಚಾಂಗ ಶ್ರವಣವು ಕೇವಲ

ಆಚರಣೆ ಅಲ್ಲ, ಅದು ಒಂದು ವಿಜ್ಞಾನ.

ಮಳೆ–ಬೆಳೆಯ ಅಂದಾಜು

ರಾಶಿಫಲಗಳ ವಿಶ್ಲೇಷಣೆ

ಜೀವನ ನಿರ್ಧಾರಗಳಿಗೆ ಮುನ್ನೆಚ್ಚರಿಕೆ

ಇದು ಇಂದಿನ ಡೇಟಾ ಅನಾಲಿಟಿಕ್ಸ್‌ಗೆ

ಸಮಾನವಾದ ಪರಂಪರೆ ಜ್ಞಾನ.

● ಹೊಸ ಹಾದಿಯ ಸಂಕಲ್ಪ

ಯುಗಾದಿ ಎಂದರೆ ಕೇವಲ ಹೊಸ ಬಟ್ಟೆ, ಸಿಹಿ ತಿಂಡಿ ಅಲ್ಲ. ಅದು ಒಂದು ಒಳಮನದ ಪರಿವರ್ತನೆ.

"ಹಳೆಯ ನೋವು ಮರೆತು ಮುಂದೆ

ಸಾಗೋಣ,

ಹೊಸ ಆಶೆಯೊಂದಿಗೆ ಬದುಕು ಕಟ್ಟೋಣ."

ಪ್ರಕೃತಿಯಂತೆ ನಾವು ಸಹ ಹಳೆಯ ದ್ವೇಷ, ಅಸೂಯೆಗಳನ್ನು ತ್ಯಜಿಸಿ, ಹೊಸ ಪ್ರೀತಿಯ ಚಿಗುರು ಬೆಳೆಸಬೇಕು.

● ತಾತ್ವಿಕ ದೃಷ್ಟಿಕೋನ

ಯುಗಾದಿಯ ಸಂದೇಶ ಸ್ಪಷ್ಟ:

ಬದಲಾವಣೆ ಪ್ರಕೃತಿಯ ನಿಯಮ

ಮರುಸೃಷ್ಟಿ (Re-invention) ಜೀವನದ ಅವಶ್ಯಕತೆ

ಸಮಚಿತ್ತತೆ

ಯಶಸ್ಸಿನ ಮೂಲ

ಕಹಿ ಅನುಭವವಿಲ್ಲದೆ ಸಿಹಿಯ ಮೌಲ್ಯ ತಿಳಿಯದು –ಇದೇ ಯುಗಾದಿಯ ಸಾರ.

● ಹೊಸ ವರ್ಷದ ಕರೆ

ಹೊಸ ವರ್ಷವು ಕೇವಲ ದಿನಾಂಕ ಬದಲಾವಣೆ ಅಲ್ಲ; ಅದು ನಡವಳಿಕೆಯ ಬದಲಾವಣೆ ಆಗಬೇಕು.

ದ್ವೇಷದ ಎಲೆಗಳು ಉದುರಲಿ

ಪ್ರೀತಿಯ ಚಿಗುರು ಮೂಡಲಿ

ಸಂತೋಷವನ್ನು ಹಂಚುವ ಮನಸ್ಸು

ಬೆಳೆಯಲಿ

ಕವಿ ದಾ.ರಾ. ಬೇಂದ್ರೆಯವರಂತೆ:

● "ಹೊಸ ವರುಷಕ್ಕೆ ಹೊಸ ಹರಷವ"

ಈ ಶೋಭಕೃತ್ ನಾಮ ಸಂವತ್ಸರವು

ನಿಮ್ಮೆಲ್ಲರ ಬದುಕಿನಲ್ಲಿ:

ಹೊಸ ಚೈತನ್ಯ ತರಲಿ

ಸಮೃದ್ಧಿ ನೀಡಲಿ

ಶಾಂತಿ ತುಂಬಲಿ

ಮನೆಯಂಗಳದ ರಂಗೋಲಿಯಂತೆ ನಿಮ್ಮ ಬದುಕು ರಂಗಾಗಲಿ,

ತೋರಣದ ಹಸಿರಿನಂತೆ ನಿಮ್ಮ ಯಶಸ್ಸು ಸದಾ ನಿಲ್ಲಲಿ.

ಯುಗಾದಿ ಹಬ್ಬದ ಹಾರ್ದಿಕ





ಲಾಜರ್ ಸಿರಿಲ್ ಜಿ

# ಕ್ಷಯರೋಗಕ್ಕೆ ಚಿಕಿತ್ಸೆ ಪಡೆಯುವ ರೋಗಿಗಳಿಗೆ ಬೆಂಬಲವಾಗಿ ರೈಕೆಮ್ ಮಡಿಕೇರ್ ರವರಿಂದ ಪೌಷ್ಟಿಕ ಆಹಾರ ಕಿಟ್ ವಿತರಣೆ

ನೈಜ್ಯ ದೆಸೆ ನ್ಯೂಸ್

**ಸಾವಿರಾರು ವರ್ಷಗಳಿಂದ ಸಮುದಾಯದಲ್ಲಿ ಬೇರುರಿರುವ ಕ್ಷಯರೋಗ (ಟಿಬಿ) ಯನ್ನು ಕೊನೆಗಾಣಿಸಲು ಉಚಿತ ಚಿಕಿತ್ಸೆ ನೀಡುವ ಜೊತೆಗೆ ದಾನಿಗಳಿಂದ ರೋಗಿಯನ್ನು ಸಕಾಲದಲ್ಲಿ ಗುಣಪಡಿಸಲು ಪೌಷ್ಟಿಕ ಆಹಾರವನ್ನು ಒದಗಿಸಲಾಗುತ್ತಿದ್ದು ಪ್ರಸ್ತುತ ನಿಕ್ಷಯಮಿತ್ರ ಅಭಿಯಾನಕ್ಕೆ ಕೈಜೊಡಿಸಿರುವುದು ನಮ್ಮ ಶ್ಲಾಘನೀಯವೆಂದು ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ ಮಹಮ್ಮದ್ ಶಾಕೀರ್ ತಿಳಿಸಿದರು.**

ಜಿಲ್ಲಾಡಳಿತ ಜಿಲ್ಲಾ ಪಂಚಾಯತ, ಜಿಲ್ಲಾ ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಕ್ಷಯರೋಗ ನಿರ್ಮೂಲನಾ ಘಟಕದೊಂದಿಗೆ ರೈಕೆಮ್ ಮೆಡಿಕೇರ್ ಪ್ರೈವೇಟ್ ಲಿಮಿಟೆಡ್ ರವರಿಂದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯದಲ್ಲಿ 25 ಕ್ಷಯರೋಗಿಗಳಿಗೆ ಒದಗಿಸಿದ ಕಿಟ್ ವಿತರಣೆಯ ಸಂದರ್ಭದಲ್ಲಿ ಮಾತನಾಡುತ್ತಾ, ಜಿಲ್ಲಾಡಳಿತದ ಮಾರ್ಗದರ್ಶನದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ ಸುರೇಂದ್ರಬಾಬು ನಿರಂತರ ಸಂವಹನದೊಂದಿಗೆ ಕಂಪನಿಯ ಸಿಎಸ್‌ಆರ್ ಅನುದಾನದಡಿಯಲ್ಲಿ ಮುಂದಿನ ಆರು ತಿಂಗಳು ಕಾಲ ಪೌಷ್ಟಕಾಹಾರ ಕಿಟ್ ನೀಡಲು ಒಪ್ಪಿಕೊಂಡಿದ್ದು, ಇದು ಜಿಲ್ಲೆಯ ಕ್ಷಯ ರೋಗಿಗಳಿಗೆ ಸಕಾಲದಲ್ಲಿ ಗುಣ ಮುಖರಾಗಲು ಸಹಕಾರಿ ಎಂದು ತಿಳಿಸಿದರು. ರೈಕೇಮ್ ಕಂಪನಿಯ ಪ್ಲಾಂಟ್ ಹೆಡ್ ಪ್ರಲ್ಹಾದ್‌ರಾವ್ ಮಾತನಾಡಿ ಸಮಾಜಮುಖಿಯಾಗುವ ಇಂತಹ ಕಾರ್ಯಕ್ಕೆ ಸದಾ ಬೆಂಬಲಿಸುತ್ತೇವೆ, ದತ್ತು ತೆಗೆದುಕೊಂಡ ಎಲ್ಲರಿಗೂ ದವಸ-ಧಾನ್ಯ ಒಳಗೊಂಡ ಕೀಟ್‌ನ್ನು ಸಕಾಲದಲ್ಲಿ ತಲುಪಿಸುವ ವ್ಯವಸ್ಥೆ ಮಾಡುತ್ತೆವೆ ಎಂದರು. ಈ ಸಂದರ್ಭದಲ್ಲಿ ಕಂಪನಿಯ ಕಂಪ್ಲೈನಿ ಅಧಿಕಾರಿ ಸ್ಪೂರ್ತಿ, ಪ್ರೊಡಕ್ಷನ್ ಮ್ಯಾನೇಜರ್ ಕಿಶೋರ್ ರೆಡ್ಡಿ, ಅಸಿಸ್ಟೆಂಟ್ ಹೆಚ್‌ಆರ್ ರೇಣುಕಾ, ಕಲ್ಯಾಣ ಕರ್ನಾಟಕ ರೈತ ಸಂಘದ ಅಧ್ಯಕ್ಷ ಜಿಂದಪ್ಪ, ಸೂಗೂರೇಶ್, ಡಿಹೆಚ್‌ಇಓ ಈಶ್ವರ ಹೆಚ್ ದಾಸಪ್ಪನವರ, ಡಿವೈಹೆಚ್‌ಇಓ ಬಸಯ್ಯ, ಡಿಪಿಪಿಎಮ್ ಮೋಹಿನ್ ಪಾಶಾ, ಜಿಲ್ಲಾ ಕಾರ್ಯಕ್ರಮ ಸಂಯೋಜಕ ಅಮರೇಶ್ ಕುಮಾರ್, ವಿಹೆಚ್‌ಎನ್‌ಡಿ ಸಲಹೆಗಾರ ಬಸವರಾಜ ಗೌಡ, ಎಸ್‌ಟಿಎಲ್‌ಎಸ್ ಅಬ್ದುಲ್ ನಭಿ, ಎಸ್‌ಟಿಎಸ್ ನಾಗಭೂಷಣ, ಕ್ಷಯರೋಗ ವಿಭಾಗದ ಅರವಿಂದಕುಮಾರ್, ನಸೀಮಾ ಬಾನು ಉಪಸ್ಥಿತರಿದ್ದರು.



# ಡಿಡಿಯು–ಜಿಕೆವೈ ಯೋಜನೆಯಡಿಯಲ್ಲಿ ಹಮ್ಮಿಕೊಂಡಿದ್ದ ಉದ್ಯೋಗ ಮೇಳ ಉದ್ಘಾಟನೆ



ನೈಜ್ಯ ದೆಸೆ ನ್ಯೂಸ್

**ಉದ್ಯೋಗಾಕಾಂಕ್ಷಿಗಳು ತಮ್ಮ ಶಿಕ್ಷಣದ ಜತೆಗೆ ತಾಂತ್ರಿಕ ಕೌಶಲ್ಯಗಳಿಗೆ ಹೆಚ್ಚು ಆದ್ಯತೆ ನೀಡಬೇಕು. ಯಾರು ಹೆಚ್ಚು ಓದಿಕೊಂಡಿರುತ್ತಾರೆ ಅವರು ಮಾತ್ರ ಬುದ್ಧಿವಂತರು ಎಂದು ಒಂದು ಕಾಲದಲ್ಲಿ ಹೇಳಲಾಗುತ್ತಿತ್ತು. ಆದರೆ, ಈಗ ಅದು ಬದಲಾಗಿದೆ. ಇಂದಿನ ತಾಂತ್ರಿಕ ಯುಗದಲ್ಲಿ ವಿದ್ಯಾಭ್ಯಾಸ, ಜ್ಞಾನದ ಜೊತೆಗೆ ಕೌಶಲ್ಯ ಮತ್ತು ಮನೋಭಾವ ಬಹಳ ಮುಖ್ಯವಾಗಿದೆ" ಎಂದು ಕೊಪ್ಪಳ ಜಿಲ್ಲಾಧಿಕಾರಿ ಡಾ.ಸುರೇಶ ಬಿ.ಇಟ್ನಾಳ ಹೇಳಿದರು.**

ಕೊಪ್ಪಳ ನಗರದ ಸರ್ಕಾರಿ ಪ್ರಥ-ಮ ದರ್ಜೆ ಕಾಲೇಜಿನಲ್ಲಿ ಡಿಡಿಯು–ಜಿಕೆವೈ ಯೋಜನೆಯಡಿಯಲ್ಲಿ ಹಮ್ಮಿಕೊಂಡಿದ್ದ ಉದ್ಯೋಗ ಮೇಳವನ್ನು ಉದ್ಘಾಟಿಸಿ ಅವರು ಮಾತನಾಡಿದರು. "ತಾಂತ್ರಿಕ ಕೌಶಲ್ಯವನ್ನು ಹೊಂದಿರುವವರು ಕಾರ್ಖಾನೆಗಳಲ್ಲಿ, ಖಾಸಗಿ ಅಥವಾ ಸರ್ಕಾರಿ ವಲಯಗಳಲ್ಲಿ ಸುಲಭವಾಗಿ ಉದ್ಯೋಗ ಪಡೆದುಕೊಳ್ಳಲು ಸಾಧ್ಯವಾಗುತ್ತದೆ. ಇಂದಿನ ತಂತ್ರಜ್ಞಾನ ಯುಗದಲ್ಲಿ ವಿದ್ಯಾಭ್ಯಾಸದ ಜೊತೆಗೆ ಕೌಶಲ್ಯ ತರಬೇತಿಗಳು ಅತ್ಯವಶ್ಯಕವಾಗಿರುವುದ-ರಿಂದ ಸರ್ಕಾರಗಳು ಹಲವಾರು ಕೌಶಲ್ಯ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬರುತ್ತಿವೆ" ಎಂದರು.

"ಕೌಶಲಾಭಿವೃದ್ಧಿ ತರಬೇತಿಯ ಸದ್ಬಳಕೆಯನ್ನು ಮಾಡಿಕೊಳ್ಳಲು ವಿದ್ಯಾರ್ಥಿಗಳು, ಯುವ ಜನತೆ ಮುಂದೆ ಬರಬೇಕು. ಭಾರತದಲ್ಲಿ ಪದವಿ ಪೂರ್ಣಗೊಳಿಸಿದವರಲ್ಲಿ ಶೇ. 50ರಷ್ಟು ಜನರಿಗೆ ಮಾತ್ರ ಉದ್ಯೋಗ ಸಿಗುತ್ತಿದೆ. ಬಹಳಷ್ಟು ಜನ ನಿರುದ್ಯೋಗಿಗಳಾಗಿ ಉಳಿಯುತ್ತಿದ್ದಾರೆ" ಎಂದು ಹೇಳಿದರು. "ಈ ಹಿನ್ನೆಲೆಯಲ್ಲಿ ನ್ಯಾಷ್ನಲ್ ಸ್ಕಿಲ್ ಕ್ವಾಲಿಫಿಕೇಶನ್ ಫ್ರೇಮ್‌ವರ್ಕ್ (ಎನ್.ಎಸ್.ಕ್ಯೂ.ಎಫ್) ಮೂಲಕ ನ್ಯಾಷ್ನಲ್ ಸ್ಕಿಲ್ ಡೆವಲೆಪ್ಮೆಂಟ್ ಕೌನ್ಸಿಲ್ ರವರು ಸುಮಾರು 8 ಹಂತಗಳಲ್ಲಿ ವೃತ್ತಿಪರ ತರಬೇತಿಯನ್ನು ನೀಡುತ್ತಾರೆ. ಇದರಿಂದ ಶಾಲಾ ಶಿಕ್ಷಣದೊಂದಿಗೆ ತಾಂತ್ರಿಕ ಕೌಶಲ್ಯಗಳನ್ನು ಜೋಡಿಸಿ, ಉದ್ಯೋಗಾವಕಾಶಗಳನ್ನು ಹೆಚ್ಚಿಸಲು ಮತ್ತು ಕಲಿಕೆಯಲ್ಲಿ ನಮ್ಯತೆಯನ್ನು ಒದಗಿಸಲು ಸಹಾಯವಾಗುತ್ತದೆ" ಎಂದು ವಿವರಿಸಿದರು.

"ಪದವಿ ಪೂರ್ಣಗೊಳಿಸಿದ ಅಭ್ಯರ್ಥಿಗಳು ಇದರಲ್ಲಿ ನೋಂದಾಯಿಸಿಕೊಂಡು ತರಬೇತಿ ಪಡೆದು ಪ್ರಮಾಣ ಪತ್ರ ಪಡೆದುಕೊಂಡಲ್ಲಿ ನಿಮಗೆ ಸುಲಭವಾಗಿ ಉದ್ಯೋಗವನ್ನು ಪಡೆದುಕೊಳ್ಳಲು ಅನುಕೂಲವಾಗುತ್ತದೆ. ಕೊಪ್ಪಳ ಜಿಲ್ಲೆಯ ತಳಕಲ್‌ನಲ್ಲಿ ವಿಟಿಯು ಬಹು ಕೌಶಲ್ಯ ಕೇಂದ್ರವಿದ್ದು, ವಿವಿಧ ಕೌಶಲ್ಯ ತರಬೇತಿಯನ್ನು ನೀಡಲಾಗುತ್ತಿದೆ" ಎಂದು ಹೇಳಿದರು. ಜಿಲ್ಲಾ ಕೌಶಲ್ಯಾಭಿವೃದ್ಧಿ ಅಭಿವೃದ್ಧಿ ಅಧಿಕಾರಿ ಕೆ.ಗವಿಶಂಕರ್ ಮಾತನಾಡಿ, "ಉದ್ಯೋಗ ಮೇಳದಲ್ಲಿ ಸುಮಾರು 61ಕ್ಕೂ ಅಧಿಕ ಕಂಪನಿಗಳು ಪಾಲ್ಗೊಂಡಿವೆ. ಉದ್ಯೋಗಕ್ಕಾಗಿ ಎರಡು ಸಾವಿರ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ನೋಂದಣಿ ಮಾಡಿಕೊಂಡಿದ್ದು, ಸುಮಾರು 300ಕ್ಕೂ ಹೆಚ್ಚು ಉದ್ಯೋಗಾಕಾಂಗಿಶಗಳು ಭಾಗವಹಿಸಿದ್ದಾರೆ" ಎಂದರು.

"ಯಾವುದೇ ವಿದ್ಯಾರ್ಹತೆ ಇರಲ್ಲಿ ಎಲ್ಲರೂ ತಮ್ಮ ಕೌಶಲ್ಯಾಧಾರಿತ ಸಂದರ್ಶನ ನೀಡಿ ಉದ್ಯೋಗ ಪಡೆದುಕೊಳ್ಳಬೇಕು. ಉದ್ಯೋಗಾಕಾಂಕ್ಷೆ ಹೊಂದಿರುವ ಯುವಕರು ಇಂತಹ ಮೇಳಗಳಲ್ಲಿ ಭಾಗವಹಿಸಿ, ಉದ್ಯೋಗದ ನೆರವು ಪಡೆದುಕೊಳ್ಳಬೇಕು. ಉದ್ಯೋಗಾಕಾಂಕ್ಷಿಗಳು, ಈ ಮೇಳದಲ್ಲಿ ಬಂದಿರುವ ಎಲ್ಲಾ ಕಂಪನಿಗಳಿಗೆ ಸಂದರ್ಶನ ನೀಡಿ, ನಿಮಗೆ ಸಮಂಜಸ ಎನಿಸುವ ಕಂಪನಿಯನ್ನು ಆಯ್ಕೆ ಮಾಡಿಕೊಂಡು, ಸಂದರ್ಶನ ನೀಡಬೇಕು" ಎಂದು ಕರೆ ನೀಡಿದರು.

# ಮಾರ್ಚ್ 26ರಂದು ರಾಜ್ಯ ಮಾನವ ಹಕ್ಕುಗಳ ಆಯೋಗದ ಸಭೆ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಇಲ್ಲಿನ ಜಿಲ್ಲಾಡಳಿತದಿಂದ ಇದೇ ಮಾರ್ಚ್ 31ರ ಮಂಗಳವಾರ ದಂದು ಸರ್ಕಾರದ ಆದೇಶದಂತೆ ಭಗವಾನ್ ಮಹಾವೀರ ಅವರ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಅವರು sambamdisida ಅಧಿಕಾರಿಗಳಿಗೆ ಸೂಚನೆ ನೀಡಿದರು.**

ಮಾರ್ಚ್ 17ರ ಮಂಗಳವಾರ ದಂದು ನಗರದ ನೂತನ ಜಿಲ್ಲಾಧಿಕಾ-ರಿಗಳ ಕಚೇರಿಯ ಸಭಾಂಗಣದಲ್ಲಿ ಭಗವಾನ್ ಮಹಾವೀರ ಜಯಂತಿ ಕು-ರಿತು ನಡೆದ ಪೂರ್ವಭಾವಿ ಸಭೆ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಭಗವಾನ್ ಮಹಾವೀರ ಅವರ ಭಾವಚಿತ್ರಕ್ಕೆ ಪುಷ್ಪಹಾರ ಸಮರ್ಪಣೆ, ಪುಷ್ಪ ನಮನಗಳನ್ನು ಸಲ್ಲಿಸಿದ ಬಳಿಕ ಅಂದು ಬೆಳಿಗ್ಗೆ 08:30ಕ್ಕೆ ನಗರದ ಜೈನ್ ಮಂದಿರದ ಮೆರವಣಿಗೆ ಹೊರಟು ಸೂಪರ್ ಮಾರ್ಕೆಟ್, ತೀನ್ ಕಂದಿಲ್, ಬಟ್ಟೆ ಬಜಾರ್, ಮಹಾವೀರ ವೃತ್ತದ ಮುಖಾಂತರ ಜೈನ್ ಮಂದಿರಕ್ಕೆ ಬಂದು ಸೇರಲಿದೆ. ನಂತರ ಬೆಳಿಗ್ಗೆ 11 ಗಂಟೆಗೆ ಜೈನ್ ಮಂದಿರದ ಆರಾಧನ ಸಭಾ ಭವನದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ. ಮೆರವಣಿಗೆ ಮತ್ತು ವೇದಿಕೆಯ ಕಾರ್ಯಕ್ರಮಕ್ಕೆ ಸಂಬಂಧಿಸಿದ ಅಧಿಕಾ-ರಿಗಳು ಅಗತ್ಯ ಸಿದ್ಧತೆ ಕೈಗೊಳ್ಳಬೇಕು ಎಂದು ಸೂಚನೆ ನೀಡಿದರು. ಭಗವಾನ್ ಮಹಾವೀರ ಅವರ ವೃತ್ತವನ್ನು ಅಲಂಕಾರಗೊಳಿಸಬೇಕು. ವಿದ್ಯುತ್ ದೀಪಾಲಂಕಾರ ಮಾಡಬೇಕು. ಶಾಮಿಯಾನ, ಆಸನಗಳು, ಧ್ವನಿವರ್ಧಕ, ಕುಡಿಯುವ ನೀರು, ರಥದ ಸಿದ್ಧತೆ ಹಾಗೂ ಜೈನ್ ಮಂದಿರ ಸುತ್ತ–ಮುತ್ತ ಸ್ವಚ್ಛತೆ, ಕುಡಿಯುವ ನೀರಿನ ಟ್ಯಾಂಕರ್ ಇತ್ಯಾದಿ ವ್ಯವಸ್ಥೆಗಳನ್ನು ರಾಯಚೂರು ಮಹಾನಗರ ಪಾಲಿಕೆಯ ಸಂಬಂಧಿಸಿದ ಅಧಿಕಾರಿಗಳು ಮಾಡಬೇಕೆಂದು ಅಪರ ಜಿಲ್ಲಾಧಿಕಾರಿಗಳು ಸೂಚಿಸಿದರು. ಶ್ರೀಮತಿ ಪ್ರೇಮಲತಾ ಹರದರೆ ರಾಯಚೂರು ಅವರಿಂದ ಉಪನ್ಯಾಸ ನಡೆಸಲು ಸಭೆಯಲ್ಲಿ ಒಮ್ಮತದ ತೀರ್ಮಾನ ಮಾಡಲಾಯಿತು.

ಭಗವಾನ್ ಮಹಾವೀರ ಜಯಂತಿ ಕಾರ್ಯಕ್ರಮದ ಆಮಂತ್ರಣ ಪತ್ರಿಕೆಯನ್ನು ಶಿಷ್ಟಾಚಾರದಂತೆ ಮುದ್ರಿಸಿ ವಿತರಿಸಲು ಸೂಚನೆ ನೀಡಲಾಯಿತು. ಜಯಂತಿ ಆಚರಣೆಯನ್ನು ಎಲ್ಲಾ ಇಲಾಖೆಗಳಲ್ಲಿ, ತಾಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಹಾಗೂ ಶಾಲಾ ಕಾಲೇಜುಗಳಲ್ಲಿ ಕಡ್ಡಾಯವಾಗಿ ಆಚರಿಸಲು ಸಂಬಂಧಿಸಿದ ಅಧಿಕಾ-ರಿಗಳು ಅಗತ್ಯ ಕ್ರಮವಹಿಸಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ಅಪರ ಜಿಲ್ಲಾಧಿಕಾರಿಗಳು ಸೂಚಿಸಿದರು. ಇದಕ್ಕೂ ಮುಂಚೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕಿ ಉತ್ತರಾದೇವಿ ಅವರು ಸಭೆಗೆ ಆಗಮಿಸಿದ ಸರ್ವರನ್ನೂ ಸ್ವಾಗತಿಸಿದರು. ಇದೇ ಸಂದರ್ಭದಲ್ಲಿ ಮಹಾವೀರ ಹಾರದಾರ್, ಅಶೋಕ ಲೋದಾ, ಎಸ್. ಎಸ್.ಜೈನ್ ಸಾವ್, ಗೌತಮಿ ಗಿಯ್, ರಾಜೇಂದ್ರ ಕುಮಾರ್, ಅಶೋಕ ಕುಮಾರ್ ಸಿ.ಕೆ ಜೈನ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ಇದ್ದರು.

